ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 50 RNI Number : KNKAN/25/A2770 24-02-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :50 ರಾಯಚೂರು 24-02-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಸಿರವಾರ ಅಭಿವೃದ್ಧಿಗೆ ಇಲ್ಲದ ಆಸಕ್ತಿ - ಜಿಲ್ಲಾ ಸೇರ್ಪಡೆಗೆ ಏಕೆ ಈ ಹಿತಾಸಕ್ತಿ?

ಸಿರವಾರನ್ನು ಸಿಂಧನೂರಿಗೆ ಸೇರಿಸುವುದನ್ನು ಖಂಡಿಸಿ ಉಗ್ರ ಹೋರಾಟ

ಸಿರವಾರ,ಫೆ.23-

ರಾಜ್ಯದಲ್ಲಿ ನೂತನ ಜಿಲ್ಲೆಯಾಗಿ ಘೋಷಣೆಯಾಗುವ ಸಾಧ್ಯತೆಯಿರುವ ಸಿಂಧನೂರಿಗೆ ಸಿರವಾರ ತಾಲುಕನ್ನು ಸೇರಿಸುವ ಪ್ರಸ್ತಾವನೆಗೆ ವಿರೋಧ ವ್ಯಕ್ತಪಡಿಸಿ ಸಿರವಾರ ತಾಲುಕಿನಲ್ಲಿ ಭಾರೀ ಹೋರಾಟ ನಡೆಯಿತು. ತಾಲುಕಿನ ಹಿರಿಯ ಕಾಂಗ್ರೆಸ್ ಮುಖಂಡರಾದ ಸೂಗಪ್ಪ ಸಾಹುಕಾರ ಚುಕ್ಕಿ, ಬಿಜೆಪಿ ನಾಯಕರು ಜೆ. ಶರಣಪ್ಪ ಗೌಡ, ಗಂಗಾಧರ ನಾಯಕ, ಜೆ. ದೇವರಾಜ್ ಗೌಡ ಹಾಗೂ ಇತರ ಪ್ರಮುಖ ಮುಖಂಡರ ನೇತೃತ್ವದಲ್ಲಿ ಈ ಹೋರಾಟ ಹಮ್ಮಿಕೊಳ್ಳಲಾಯಿತು.

ರಾಜ್ಯದ ಪ್ರಸಕ್ತ ಸಾಲಿನ ಬಜೆಟ್ ಮಂಡನೆ ಸನ್ನಿಹವಾಗುತ್ತಿರುವ ಹಿನ್ನೆಲೆ, ಸಿಂಧನೂರನ್ನು ಜಿಲ್ಲೆಯಾಗಿ ಘೋಷಿಸುವ ಪ್ರಸ್ತಾವನೆಯ ಸುದ್ದಿ ಹರಿದಾಡುತ್ತಿದೆ. ಈ ಘೋಷಣೆಯ ಪ್ರಕ್ರಿಯೆಯಲ್ಲಿ ಭೌಗೋಳಿಕವಾಗಿ ಸಮೀಪದಲ್ಲಿರುವ ತಾಲುಕಗಳನ್ನು ಸೇರಿಸುವ ಪ್ರಕ್ರಿಯೆಯ ಭಾಗವಾಗಿ ಸಿರವಾರ ತಾಲುಕನ್ನು ಕೂಡ ಸೇರಿಸುವ ಉದ್ದೇಶವಿದೆ ಎಂಬ ಮಾಹಿತಿ ಸಾರ್ವಜನಿಕರಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ.

ಭೌಗೋಳಿಕ ಅನಾನುಕೂಲಗಳು

ಸಿರವಾರದಿಂದ ರಾಯಚೂರು ಕೇವಲ 36 ಕಿ.ಮೀ ದೂರದಲ್ಲಿದ್ದು, ಸಿಂಧನೂರು ಸುಮಾರು 80 ಕಿ.ಮೀ ದೂರದಲ್ಲಿದೆ. ಇಂತಹ ಪರಿಸ್ಥಿತಿಯಲ್ಲಿ ದೂರದ ಜಿಲ್ಲೆಗೆ ಸೇರ್ಪಡೆ ಮಾಡುವುದರಿಂದ ಜನರಿಗೆ ಗಂಭೀರ ತೊಂದರೆಗಳು ಎದುರಾಗಲಿವೆ.

ಪ್ರಮುಖ ಅನಾನುಕೂಲಗಳು

1. ಆಡಳಿತಾತ್ಮಕ ತೊಂದರೆ:

ಸರ್ಕಾರಿ ಕಚೇರಿಗಳಿಗೆ ಹೋಗಲು ಜನರು ಹೆಚ್ಚು ದೂರ ಪ್ರಯಾಣಿಸಬೇಕಾಗುತ್ತದೆ.

2. ಆರ್ಥಿಕ ಭಾರ:



ದಿನನಿತ್ಯದ ಕೆಲಸಗಳಿಗಾಗಿ ಪ್ರಯಾಣ ವೆಚ್ಚ ದ್ವಿಗುಣವಾಗುತ್ತದೆ.

3. ಆರೋಗ್ಯ ಸೇವೆಗಳ ತೊಂದರೆ:

ತುರ್ತು ಚಿಕಿತ್ಸೆ ಗೆ ಜಿಲ್ಲಾ ಆಸ್ಪತ್ರೆಗೆ ತಲುಪಲು ಹೆಚ್ಚು ಸಮಯ ಬೇಕಾಗುತ್ತದೆ.

4. ವಿದ್ಯಾರ್ಥಿಗಳಿಗೆ ಅನಾನುಕೂಲ:

ಜಿಲ್ಲಾ ಮಟ್ಟದ ಶಿಕ್ಷಣ ಸಂಬಂಧಿತ ಕೆಲಸಗಳಿಗೆ ವಿದ್ಯಾರ್ಥಿಗಳು ಹೆಚ್ಚುವರಿ ಪ್ರಯಾಣ ಮಾಡಬೇಕಾಗುತ್ತದೆ.

5. ಕೃಷಿಕರಿಗೆ ತೊಂದರೆ:

ಕೃಷಿ ಇಲಾಖೆ, ಭೂ ದಾಖಲೆ, ಸಬ್ಸಿ ಡಿ ಸಂಬಂಧಿತ ಕೆಲಸಗಳಿಗೆ ದೂರ ಪ್ರಯಾಣ ಅಗತ್ಯ.

6. ವ್ಯಾಪಾರ ಮತ್ತು ವಾಣಿಜ್ಯ ಹಿನ್ನಡೆ:

ಸ್ಥಳೀಯ ವ್ಯಾಪಾರಿಗಳಿಗೆ ಹೂಡಿಕೆ ಮತ್ತು ಅಭಿವೃದ್ಧಿಗೆ ಹಿನ್ನಡೆಯಾಗುವ ಸಾಧ್ಯತೆ.

7. ಸಾರಿಗೆ ಸಮಸ್ಯೆ:

3ನೇ ಪುಟಕ್ಕೆ

ಹೋರಾಟದ ಎಚ್ಚರಿಕೆ:

ಸರ್ಕಾರ ಈ ಪ್ರಸ್ತಾವನೆಯನ್ನು ಹಿಂಪಡೆಯದಿದ್ದರೆ

- ಉಗ್ರ ಹೋರಾಟ
- ಬಂದ್ ಕರೆ
- ರಸ್ತೆ ತಡೆ
- ಜಿಲ್ಲಾ ಮಟ್ಟದ ಪ್ರತಿಭಟನೆ

ಹೀಗೆ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಮುಖಂಡರು ತಿಳಿಸಿದ್ದಾರೆ.

ಸಾರ್ವಜನಿಕರ ಅಭಿಪ್ರಾಯ

ಸ್ಥಳೀಯರು ಹೇಳುವುದೇನೆಂದರೆ,. ದೂರದ ಸಿಂಧನೂರಿಗೆ ಸೇರಿಸುವುದು ಜನವಿರೋಧಿ ಕ್ರಮವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜೊತೆಗೆ ಸಿರವಾರ ಅಭಿವೃದ್ಧಿ ಸಮಸ್ಯೆಗಳನ್ನು ಕಡೆಗಣಿಸಿ ದೂರದ ಜಿಲ್ಲೆಗೆ ಸೇರ್ಪಡೆ ಮಾಡುವ ಪ್ರಸ್ತಾವನೆಗೆ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಸರ್ಕಾರವು ಜನರ ಭಾವನೆಗಳಿಗೆ ಸ್ಪಂದಿಸದಿದ್ದರೆ ಈ ಹೋರಾಟ ರಾಜ್ಯ ಮಟ್ಟಕ್ಕೆ ವಿಸ್ತರಿಸುವ ಸಾಧ್ಯತೆ ಇದೆ.

ಕಣ್ಣುಗಳ ಆರೈಕೆಗೆ ನಾವೆಲ್ಲರೂ ಮಹತ್ವ ನೀಡೋಣ: ಡಾ.ಸುರೇಂದ್ರ ಬಾಬು

ರಾಯಚೂರು ಫೆಬ್ರವರಿ 23

ಪ್ರತಿ ವ್ಯಕ್ತಿಯ ಜೀವನದಲ್ಲಿ ಕಣ್ಣುಗಳು ಕೇವಲ ದೇಹದ ಅಂಗ ಮಾತ್ರ ಅಲ್ಲ, ವ್ಯಕ್ತಿಯ ಸಾಧನೆ, ಕುಟುಂಬದ ನಿರ್ವಹಣೆ ಸೇರಿದಂತೆ ಜೀವನಪೂರ್ತಿ ಪ್ರತಿ ಹಂತದಲ್ಲೂ ತನ್ನದೆ ಮಹತ್ವ ಸಾರುವ ಕಣ್ಣುಗಳು ಆರೈಕೆಗೆ ನಾವೆಲ್ಲರೂ ಮಹತ್ವ ನೀಡಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಹೇಳಿದರು.

ಇತ್ತೀಚೆಗೆ ನಗರದ ನವೋದಯ ವೈದ್ಯಕೀಯ ಮಹಾವಿದ್ಯಾಲಯದ ಎಸ್ ಆರ್ ಹೆಗಡೆ ಸಿಲ್ವರ್ ಜ್ಯುಬಿಲಿ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ನವೋದಯ ವೈದ್ಯಕೀಯ ಶಿಕ್ಷಣ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ನಿರಂತರ ವೈದ್ಯಕೀಯ ಆರೋಗ್ಯ ಶಿಕ್ಷಣ ಕಾರ್ಯಕ್ರಮದಡಿ ಸಮುದಾಯದಲ್ಲಿ ಕಣ್ಣುಗಳ ಆರೈಕೆಯಲ್ಲಿ ಡಿಬಿಸಿಎಸ್ ಪಾತ್ರ ಎಂಬ ವಿಷಯದಡಿ ಕಣ್ಣಿನ ಆರೈಕೆಯ ನಿರಂತರ ವೈದ್ಯಕೀಯ ಆರೋಗ್ಯ ಶಿಕ್ಷಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಅಂಧತ್ವವನ್ನು ತಡೆಗಟ್ಟಲು ಆರೋಗ್ಯ ಇಲಾಖೆ ಕ್ಷೇತ್ರ ಮಟ್ಟದಲ್ಲಿ ತಪಾಸಣೆ, ಕನ್ನಡಕ ವಿತರಣೆ, ಉಚಿತ ನೇತ್ರ ಶಸ್ತ್ರಚಿಕಿತ್ಸ ಶಿಬಿರಗಳನ್ನು ಏರ್ಪಡಿಸುತ್ತಿದ್ದು, ಇತ್ತಿಚಿಗೆ ಕರ್ನಾಟಕ



ಸರಕಾರವು ಸಮುದಾಯ ಆರೋಗ್ಯ ಕೇಂದ್ರ, ಸಾರ್ವಜನಿಕ ಆಸ್ಪತ್ರೆ, ಜಿಲ್ಲಾ ಆಸ್ಪತ್ರೆಗಳಲ್ಲಿ ಸುಸಜ್ಜಿತ ಆಶಾಕಿರಣ ದೃಷ್ಟಿಕೇಂದ್ರಗಳನ್ನು ಆರಂಭಿಸಿದ್ದು, ಈ ದಿಶೆಯಲ್ಲಿ ಕಣ್ಣಿನ ಆರೈಕೆ ಮತ್ತು ಅಂಧತ್ವ ತಡೆಗಟ್ಟುವಿಕೆಯ ಬಗ್ಗೆ ಸಮುದಾಯ ಜಾಗೃತಿ ಅವಶ್ಯವಾಗಿದ್ದು, ನವೋದಯ ವೈದ್ಯಕೀಯ ಮಹಾವಿದ್ಯಾಲಯವು 2003ರಿಂದ ಡಿಬಿಸಿಎಸ್ ಅನ್ನು ಅನುಷ್ಠಾನಗೊಳಿಸಿದ್ದು, ನೇತ್ರ ಸುರಕ್ಷತೆಗೆ ಅವರ ಸಾಮಾಜಿಕ ಕಳಕಳಿಗೆ ಸಾಕ್ಷಿಯಾಗಿದೆ ಎಂದರು.

ಈ ವೇಳೆ ನವೋದಯ ಶೈಕ್ಷಣಿಕ ಟ್ರಸ್ಟ್ ರಜಿಸ್ಟರರ್ ಡಾ.ಶ್ರೀನಿವಾಸ್ ಟಿ, ಅವರು ಮಾತನಾಡಿ, ಕರ್ನಾಟಕ ಸರಕಾರದ ಮಾರ್ಗಸೂಚಿಯಡಿ ಆರೋಗ್ಯ ಇಲಾಖೆಯ ಜಿಲ್ಲಾ ಅಂಧತ್ವ ನಿಯಂತ್ರಣ ಸಂಘದೊದಿಗೆ ನಿರಂತರ ಸಮನ್ವಯ ಕೈಗೊಂಡು ಬಡವರು ಮತ್ತು ನಿರ್ಗತಿಕರಿಗೆ ಉಚಿತ ಕಣ್ಣಿನ ಆರೈಕೆಗಾಗಿ 2003 ರಿಂದ ಡಿಬಿಸಿಎಸ್ ಅಡಿಯಲ್ಲಿ 25,000ಕ್ಕೂ ಹೆಚ್ಚು ನೇತ್ರಪೊರೆ ಶಸ್ತ್ರಚಿಕಿತ್ಸೆ ಯನ್ನು ಕೈಗೊಳ್ಳಲಾಗಿದೆ. 2011 ರಿಂದ 100ಕ್ಕೂ ಹೆಚ್ಚು ನೇತ್ರಗಳನ್ನು ದಾನಿಗಳಿಂದ ಸಂಗ್ರಹಿಸಿದ್ದು, 100ಕ್ಕೂ ಹೆಚ್ಚು ಜನ ಅಂಧತ್ವ ಸಮಸ್ಯೆಯುಳ್ಳವರು ಇದರ ಪ್ರಯೋಜನ ಪಡೆದಿದ್ದು, ಇದಕ್ಕಾಗಿ ಕಣ್ಣಿನ ಸಮಸ್ಯೆಗಳಾದ, ದೃಷ್ಟಿದೊಷ, ಗ್ಲುಕೋಮಾ, ಡಯಾಬಿಟಿಕ್ ರೆಟಿನೋಪತಿ, ಮುಂತಾದವುಗಳಿಗೆ ಚಿಕಿತ್ಸೆ ಯನ್ನು ಎನ್‌ಎಮ್‌ಸಿಹೆಚ್ ಮತ್ತು ಆರ್‌ಸಿಯ ನೇತ್ರವಿಜ್ಞಾನ ವಿಭಾಗವು ಮುಂದುವರೆಸಿದ್ದು, ಇನ್ನು ಹೆಚ್ಚಿನ ಕಾರ್ಯಕ್ರಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ಈ ವೇಳೆ ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಹಾಗೂ ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿ ಡಾ.ನಂದಿತಾ ಎಮ್‌ಎನ್, ನವೋದಯ ವೈದ್ಯಕೀಯ ಕಾಲೇಜು ನಿವೃತ್ತ ಪ್ರಾಧ್ಯಾಪಕಿ

3ನೇ ಪುಟಕ್ಕೆ

ಫೆ.24ರಂದು ಕ್ರೀಡಾ, ಸಾಂಸ್ಕೃತಿಕ ಉತ್ಸವ

ರಾಯಚೂರು ಫೆಬ್ರವರಿ 23

ಇಲ್ಲಿನ ಜಿಲ್ಲಾ ಪಂಚಾಯತ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಯುವ ಸಂಬಲೀಕರಣ ಮತ್ತು ಕ್ರೀಡಾ ಇಲಾಖೆಯ ರಾಯಚೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಕ್ರೀಡಾ ಮತ್ತು ಸಾಂಸ್ಕೃತಿಕ ಉತ್ಸ ವ-2026ರ ಕಾರ್ಯಕ್ರಮವನ್ನು ಫೆ.24ರ ಬೆಳಿಗ್ಗೆ 8ಗಂಟೆಗೆ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಅವರು ಉದ್ಘಾಟನೆ ನೆರವೇರಿಸುವರು.

ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್‌ಅವರು ಘನ ಉಪಸ್ಥಿತಿ ವಹಿಸುವರು.

ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎಂ.ಹನುಮತಪ್ಪ ಅವರು ಉಪಸ್ಥಿತಿ ವಹಿಸುವರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಕಾರ್ಯಕ್ರಮದಲ್ಲಿ ಬಾಗಿಯಾಗಲಿದ್ದಾರೆ.

ಅತಿಥಿಗಳಾಗಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳಾದ ಹಾಲಸಿದ್ದಪ್ಪ ಪೂಜಾರಿ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಶರಣಬಸವರಾಜ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿಗಳಾದ ಡಾ.ಟಿ.ರೋಣಿ, ಜಿಲ್ಲಾ ಪಂಚಾಯತ್ ಲೆಕ್ಕಾಧಿಕಾರಿ ವಿಜಯಶಂಕರ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ ಶಾವಂತ ಗೇರಿ ಸೇರಿದಂತೆ ಇತರರು ಭಾಗಿ ಯಾಗಲಿದ್ದಾರೆ ಎಂದು ಜಿ.ಪಂ ಪ್ರಕಟಣೆಯಲ್ಲಿ ತಿಳಿಸಿದೆ.

ಬಜೆಟ್‌ನಲ್ಲಿ ರೂ.200 ಕೋಟಿ ಮೀಸಲು ಆಗ್ರಹ



ರಾಯಚೂರು, ಫೆ.23-

202627ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಸಮಗ್ರ ಅಭಿವೃದ್ಧಿಗಾಗಿ ಕನಿಷ್ಠ ರೂ.200 ಕೋಟಿಯನ್ನು ಕಡ್ಡಾಯವಾಗಿ ಮೀಸಲಿಡಬೇಕು ಎಂದು MGSPಚಳುವಳಿ ಮುಖಂಡ ಮಹೇಶ್ ಪಾಟೀಲ್ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಮಾತನಾಡಿದ ಅವರು, ಚುನಾವಣೆಗೆ ಮುನ್ನ Indian National Congress ತನ್ನ ಪ್ರಣಾಳಿಕೆಯಲ್ಲಿ ಪ್ರತಿವರ್ಷ ?200 ಕೋಟಿಯ ಅನುದಾನ ನೀಡುವುದಾಗಿ ಭರವಸೆ ನೀಡಿತ್ತು. ಈಗ ಸರ್ಕಾರ ತನ್ನ ವಾಗ್ದಾನವನ್ನು ಈಡೇರಿಸಬೇಕು ಎಂದು ಹೇಳಿದರು.

ಮಾರ್ಚ್ ಮೊದಲ ವಾರದಲ್ಲಿ ಆರಂಭವಾಗಲಿರುವ ಬಜೆಟ್ ಅಧಿವೇಶನದಲ್ಲೇ ಪ್ರತ್ಯೇಕ ಅನುದಾನ ಘೋಷಿಸಬೇಕು. ''ಇದು ದಯೆ ಅಲ್ಲ, ಸಂವಿಧಾನಾತ್ಮಕ ಹಕ್ಕು,'' ಎಂದು ಅವರು ಸ್ಪಷ್ಟಪಡಿಸಿದರು.

ಪ್ರಮುಖ ಬೇಡಿಕೆಗಳು: ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಸ್ಥಾಪನೆ ಕನಿಷ್ಠ ರೂ. 250 ಕೋಟಿಯ ಪ್ರತ್ಯೇಕ ಬಜೆಟ್, ಪ್ರತಿ ವರ್ಷ 500 ಮನೆಗಳ ಹಂಚಿಕೆ, ಹಾಸ್ಟೆಲ್ ಹಾಗೂ ಶಾರ್ಟ್ ಸ್ಟೇ ಹೋಮ್ ಆರಂಭ

3ನೇ ಪುಟಕ್ಕೆ

ವಿದ್ಯುತ್ ಖಾಸಗೀಕರಣ ರೈತರ ಪ್ರತಿಭಟನೆ

ರಾಯಚೂರು, ಫೆ.23-

ವಿದ್ಯುತ್ ಕ್ಷೇತ್ರದ ಖಾಸಗೀಕರಣ, ಕೃಷಿ ಪಂಪ್‌ಸೆಟ್‌ಗಳಿಗೆ ಡಿಜಿಟಲ್ ಮೀಟರ್ ಅಳವಡಿಕೆ, ಆಧಾರ್ ಜೋಡಣೆ ಹಾಗೂ ಅಮೆರಿಕದ ಹೆಚ್ಚುವರಿ ಆಮದು ಸುಂಕ ವಿರುದ್ಧ ಕರ್ನಾಟಕ ರೈತರ ಕೃಷಿ ಸಂರಕ್ಷಣಾ ಜಿಲ್ಲಾ ಸಮಿತಿ ನೇತೃತ್ವದಲ್ಲಿ ರೈತರು ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ರಾಜ್ಯಾಧ್ಯಕ್ಷ ಮಸ್ತಾನ್ ನಾಯಕ್ ಪೂಜಾರಿ ಮಾತನಾಡಿ, ಕೃಷಿ ಪಂಪ್‌ಸೆಟ್‌ಗಳಿಗೆ ಸ್ಮಾರ್ಟ್ ಕಾರ್ಡ್ ಆಧಾರಿತ ಡಿಜಿಟಲ್ ಮೀಟರ್ ಅಳವಡಿಸಲು ?10,000 ಮುಂಗಡ ಶೇವಣೆ ವಿಧಿಸಿರುವುದು ರೈತರಿಗೆ ಭಾರೀ ಹೊರೆ ಆಗಲಿದೆ



ಎಂದು ಹೇಳಿದರು. ಸಣ್ಣ ಹಾಗೂ ಮಧ್ಯಮ ರೈತರಿಗೆ ಇಂತಹ ಶೇವಣಿ ಕಟ್ಟಲು ಸಾಧ್ಯವಿಲ್ಲ. ಸರ್ಕಾರ ತಕ್ಷಣ ಈ ನಿರ್ಧಾರ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಯಾವುದೇ ಕ್ರಮವನ್ನು ಕೈಬಿಡಬೇಕು. ರೈತರಿಗೆ ನೀಡುತ್ತಿರುವ ಉಚಿತ ವಿದ್ಯುತ್ ಯೋಜನೆ ಮುಂದುವರಿಸಬೇಕು ಎಂದು ಒತ್ತಾಯಿಸಿದರು. ಕೃಷಿ ವಿದ್ಯುತ್ ಸಂಪರ್ಕಗಳಿಗೆ ಆಧಾರ್ ಜೋಡಣೆ ಮಾಡುವ ಕ್ರಮವು ರೈತರ ಸಂಕಷ್ಟವನ್ನು ಹೆಚ್ಚಿಸುತ್ತದೆ.

ಅನೇಕ ಜಮೀನಿನಲ್ಲಿ ಹಲವು ಬೋರ್‌ವೆಲ್‌ಗಳಿದ್ದು, ಅಂತರ್ಜಲ ಮಟ್ಟ ಕುಸಿತದ ಹಿನ್ನೆಲೆ ಈ ನಿಯಮ ರೈತರಿಗೆ ತೊಂದರೆಯಾಗಲಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಟ್ರಾನ್ಸ್‌ಫಾರ್ಮರ್ ನೀಡುವಾಗ ಕಂಬ ಹಾಗೂ ವೈರ್ ವೆಚ್ಚವನ್ನು ರೈತರಿಂದ ವಸೂಲು ಮಾಡುವುದು ಅನ್ಯಾಯ. ಅವುಗಳನ್ನೂ ಸರ್ಕಾರವೇ ಉಚಿತವಾಗಿ ಒದಗಿಸಬೇಕು. ಜಮೀನಿನಲ್ಲಿ ವಾಸಿಸುವ ರೈತರು, ವಿದ್ಯಾರ್ಥಿಗಳು ಹಾಗೂ ಹೈನುಗಾರಿಕೆ ನಡೆಸುವವರಿಗೆ ಸಂಜೆ 6ರಿಂದ ಬೆಳಗ್ಗೆ 6ರವರೆಗೆ ಸಮರ್ಪಕ ವಿದ್ಯುತ್ ಸರಬರಾಜು ಖಚಿತಪಡಿಸಬೇಕು ಎಂದು ಒತ್ತಾಯಿಸಿದರು.

ಇನ್ನೊಂದೆಡೆ, ಅಮೆರಿಕ ಸರ್ಕಾರ ಭಾರತದಿಂದ ಆಮದು ಮಾಡುವ ಸರಕುಗಳ ಮೇಲೆ ಶೇ.25ರಷ್ಟು ಹೆಚ್ಚುವರಿ ಸುಂಕ ವಿಧಿಸುವ ಕರಡು ಅಧಿಸೂಚನೆ ಹ'ೊ ರ'ಡಿ ಸಿ ರ'ು ವ'ು ದ'ನ'್ನ ಪ್ರತಿಭಟನಾಕಾರರು ಖಂಡಿಸಿದರು.

3ನೇ ಪುಟಕ್ಕೆ

ಸಹಕಾರಿ ಸಂಘದಲ್ಲಿ ನಡೆದಿರುವ ಭ್ರಷ್ಟಾಚಾರ ಹಾಗೂ ನಿಯಮಬಾಹಿರ ನೇಮಕಾತಿ ತನಿಖೆಗೆ ಆಗ್ರಹಿಸಿ

ಮಂಗಳವಾರ ಇಲಾಖೆ ಎದುರು ಪ್ರತಿಭಟನೆ

ಜಾಲಹಳ್ಳಿ: ಗ್ರಾಮದ ರೈತ ಸೇವಾ ಪತ್ತಿನ ಸಹಕಾರಿ ಸಂಘ ನಿ, ಜಾಲಹಳ್ಳಿ ಶಾಖೆಯಲ್ಲಿ ಕಳೆದ ಎರಡು ವರ್ಷಗಳಿಂದ ನಿರಂತರ ಭ್ರಷ್ಟಾಚಾರ, ಸ್ವಜನಪಕ್ಷಪಾತ ಮತ್ತು ಅಧಿಕಾರ ದುರುಪಯೋಗ ನಡೆಯುತ್ತಿದ್ದು, ಇದರ ಪರಿಣಾಮವಾಗಿ ರೈತರು, ಶೇವಣಿದಾರರು ಹಾಗೂ ಸಣ್ಣ ವ್ಯಾಪಾರಸ್ಥರು ಭಾರೀ ನಷ್ಟ ಅನುಭವಿಸುತ್ತಿದ್ದಾರೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಗ್ರಾಮ ಘಟಕದ ಅಧ್ಯಕ್ಷ ಹನುಮಂತ ಮಡಿವಾಳ ಆರೋಪಿಸಿದರು,

ಅವರು ಗ್ರಾಮದ ಶ್ರಮಿಕ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ



ಮಾತನಾಡಿದ ಅವರು ಸಹಕಾರಿ ಸಂಘವು ರೈತರ ಆರ್ಥಿಕ ಬೆ'ನ್ನೆಲುಬಾಗಿರ'ಬೇಕಾದ' ಸಂಸ್ಥೆಯಾಗಿದ್ದರೂ, ಕೆಲ ಅಧಿಕಾರಿಗಳು ಮತ್ತು ಆಡಳಿತ ಮಂಡಳಿಯ ಸದಸ್ಯರು ಅದನ್ನು ತಮ್ಮ ವೈಯಕ್ತಿಕ ಸ್ವಾರ್ಥದ ಸಾಧನವಾಗಿ ಬಳಸಿಕೊಂಡಿರುವುದು ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಬ್ಯಾಂಕ್ ಖಾತೆಗಳಲ್ಲಿ ಹಣದ ವ್ಯತ್ಯಾಸಗಳ ಬಗ್ಗೆ ಗಂಭೀರ ಅನುಮಾನಗಳಿದ್ದರೂ, ಸಮಗ್ರ ತನಿಖೆ ನಡೆಸಲು ಮೇಲಾಧಿಕಾರಿಗಳು ಉದ್ದೇಶಪೂರ್ವಕವಾಗಿ ಹಿಂದೇಟು ಹಾಕುತ್ತಿರುವುದು ಸಾರ್ವಜನಿಕರಲ್ಲಿ ಅನುಮಾನ ಮತ್ತು ಅಸಮಾಧಾನವನ್ನು ಉಂಟುಮಾಡಿದೆ.

ಇದಲ್ಲದೆ, ಕಾರ್ಯದರ್ಶಿ ಹುದ್ದೆಯ ನೇಮಕಾತಿಯಲ್ಲಿ ಸಹಕಾರಿ ನಿಯಮಾವಳಿ ಮತ್ತು ಸರ್ಕಾರದ ಮ'ಾ ರ್ಗ ಸ'ೂ ಚಿ ಗ'ಳ'ನ'್ನ ಬಹಿರಂಗವಾಗಿ ಉಲ್ಲಂಘಿಸಲಾಗಿದೆ. ಅರ್ಹತೆ, ಪಾರದರ್ಶಕತೆ ಹಾಗೂ ಮೀಸಲಾತಿ ನಿಯಮಗಳನ್ನು ಲೆಕ್ಕಿಸದೆ ನೇಮಕಾತಿ ಪ್ರಕ್ರಿಯೆ ನಡೆಸಿರುವುದು ಸ್ಪಷ್ಟವಾಗಿದೆ. ಈ ಕುರಿತು ಹಲವಾರು ಬಾರಿ ದೂರು ನೀಡಿದರೂ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಳ್ಳದಿರುವುದು ಜಿಲ್ಲಾಡಳಿತದ ನಿ ರ್ಲ ಕ್ಷ್ಯ ವ'ಂ ದ'ು ಪರಿಗಣಿಸಲಾಗುತ್ತದ ಎಂದರು,

3ನೇ ಪುಟಕ್ಕೆ

ಬಾಲಕೇಂದ್ರ ವಾರ್ಷಿಕೋತ್ಸವ ಕಾರ್ಯಕ್ರಮ



ರಾಯಚೂರು,ಫೆ.23-

ವಿದ್ಯೆಯೇ ವಿನಯೇನ ಶೋಭತೆ ಎನ್ನುವಂತೆ ನಮ್ಮ ದೇಶದ ಸನಾತನ ಭಾಷೆ ಸಂಸ್ಕೃತ. ಸಂಸ್ಕೃತ ಭಾಷೆ ಎಲ್ಲಾ ಭಾಷೆಗಳ ಆತ್ಮ. ಸಂಸ್ಕೃತ ಕಠಿಣ ಭಾಷೆ ಎಂಬ ತಪ್ಪು ತಿಳುವಳಿಕೆ ಅನೇಕರಲ್ಲಿದೆ.

ಸಂಸ್ಕೃತ ಭಾರತೀಯ ಧ್ಯೇಯ, ಸಂಸ್ಕೃತ ಭಾಷೆಯ ಪುನರ್ಜೀವನ, ಸಂಸ್ಕೃತಿಯ ಪುನಶ್ಚೇತನ ಮತ್ತು ಭಾರತ ರಾಷ್ಟ್ರದ ಪುನರ್ ನಿರ್ಮಾಣ. ಈ ನಿಟ್ಟಿನಲ್ಲಿ ಸಂಸ್ಕೃತ ಭಾರತೀಯ ಉತ್ತರ ಕರ್ನಾಟಕ ಪ್ರಾಂತ್ಯದ ರಾಯಚೂರ ನಗರದ ಶ್ರೀ ರಾಧಾ ರಮಣ ಮತ್ತು ಸಮೃದ್ಧಿ ಬಾಲ ಕೇಂದ್ರಗಳ ವಾರ್ಷಿಕೋತ್ಸವವನ್ನು ಶಾರದಾ ವಿದ್ಯಾನಿಕೇತನ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಶ್ರೀಮತಿ ಜಯಲಕ್ಷ್ಮಿ ಬಾಗೋಡಿ ಮತ್ತು ಶ್ರೀಮತಿ ಸುನಿತಾ ಕಕ್ಕೇರಿಯವರು ಸಭೆಯನ್ನು ಉದ್ದೇಶಿಸಿ ಸಂಸ್ಕೃತ ಭಾಷೆಯ ಪ್ರಾಮುಖ್ಯತೆಯನ್ನು ವಿವರಿಸಿದರು. ಬಾಲ ಕೇಂದ್ರಗಳ ಮಕ್ಕಳು ಸಂಸ್ಕೃತ ಕಲಿಕಾ ಪ್ರದರ್ಶನವನ್ನು ನೀಡಿದರು. ಬಾಲ ಕೇಂದ್ರಗಳ ಶಿಕ್ಷಕಿಯಾದ ಗಾರ ಶ್ರೀಲಕ್ಷ್ಮಿ ಮತ್ತು ಮೈಲಾಪುರ ಮಹಾಲಕ್ಷ್ಮಿಯವರು ಕಾರ್ಯಕ್ರಮವನ್ನು ನೆರವೇರಿಸಿದರು.

ಸಂಸ್ಕೃತ ಭಾರತೀಯ ರಾಯಚೂರು

3ನೇ ಪುಟಕ್ಕೆ

ಕೃಷಿ ಲಾಭದಾಯಕ ಕ್ಷೇತ್ರವಾಗಲೂ ಸಂಶೋಧನೆ ಅಗತ್ಯ-ಸಚಿವ ಈಶ್ವರ್ ಬಿ. ಖಂಡ್ರೆ



ಬೀದರ, ಫೆ.23-

ಕೃಷಿ ಲಾಭದಾಯಕ ಕ್ಷೇತ್ರವಾಗಲೂ ಚರ್ಚೆ, ಸಂಶೋಧನೆ, ಮಾರುಕಟ್ಟೆ ಲಭ್ಯತೆ, ಸರ್ಕಾರದ ಯೋಜನೆಗಳು ರೈತರ ಮನೆ ಬಾಗಿಲಿಗೆ ತಲುಪುವಂತಾಗಬೇಕು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು. ಅವರು ರವಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಮೀನುಗಾರಿಕೆ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ನಗರದ ನೆಹರು ಕ್ರೀಡಾಂಗಣದಲ್ಲಿ ಆಯೋಜಿಸಿದ ಉದ್ಯೋಗ ಮೇಳ, ಸಿರಿಧಾನ್ಯ ಮೇಳ, ಫಲ ಮತ್ತು ಪುಷ್ಪ ಪ್ರದರ್ಶನ ಹಾಗೂ ಮತ್ಸ್ಯ ಮೇಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೈಗಾರಿಕೆಗಳು ಇಲ್ಲದಿದ್ದರಿಂದ ಶೇ. 75 ಪ್ರತಿಶತ ಜನ ಕೃಷಿ ಮೇಲೆ ಅವಲಂಬನೆ ಆಗಿದ್ದಾರೆ. ಆದ್ದರಿಂದ ಕೃಷಿಗೆ ಉತ್ತೇಜನೆ ನೀಡಬೇಕಿದೆ. ಪ್ರತಿ ವರ್ಷ ಜಿಲ್ಲೆಯಲ್ಲಿ 10 ಲಕ್ಷ ಎಕರೆ ಭೂಮಿಯಲ್ಲಿ ಬಿತ್ತಣಿಕೆ ಮಾಡಲಾಗುತ್ತದೆ. ಅದರಲ್ಲಿ ಶೇ.50 ಸೋಯಾ, ಶೇ.25 ತೊಗರಿ ಹಾಗೂ ಶೇ. 25 ಪ್ರತಿಶತದಲ್ಲಿ ಇತರೆ ಬೆಳೆಗಳನ್ನು ಬೆಳೆಯಲಾಗುತ್ತದೆ. ರೈತರು ಕೇವಲ ಒಂದೇ ಬೆಳೆಗೆ ಅವಲಂಬನೆ ಆಗದೆ ಸಿರಿಧಾನ್ಯಗಳಂತಹ ಬೇರೆ ಬೇರೆ ಬೆಳೆಗಳನ್ನು ಬೆಳೆಸಲು ಮುಂದಾಗಬೇಕು. ಸಿರಿಧಾನ್ಯಗಳು ಕೇವಲ ಆಹಾರವಲ್ಲ; ಆರೋಗ್ಯಪೂರ್ಣ ಜೀವನದ ಭದ್ರ ಆಧಾರವಾಗಿವೆ. ಸಿರಿಧಾನ್ಯಗಳು ಕಡಿಮೆ ನೀರಿನಲ್ಲಿ ಬೆಳೆಯುವ ಶಾಶ್ವತ ಬೆಳೆಗಳಾಗಿದ್ದು, ಹವಾಮಾನ ಬದಲಾವಣೆಯ ಸಂದರ್ಭದಲ್ಲಿಯೂ ರೈತರಿಗೆ ಭದ್ರ ಆದಾಯ ನೀಡುತ್ತವೆ. ಆರೋಗ್ಯ ಮತ್ತು ಕೃಷಿ ಎರಡನ್ನೂ ಒಟ್ಟಿಗೆ ರಕ್ಷಿಸುವ ಶಕ್ತಿ ಸಿರಿಧಾನ್ಯಗಳಲ್ಲಿ ಅಡಗಿದೆ. ಜನರು ತಮ್ಮ ದೈನಂದಿನ ಆಹಾರದಲ್ಲಿ ಸಿರಿಧಾನ್ಯಗಳನ್ನು ಅಳವಡಿಸಿಕೊಳ್ಳಬೇಕು. ರೈತರು ಮೌಲ್ಯವರ್ಧಿತ ಉತ್ಪನ್ನಗಳತ್ತ ಗಮನಹರಿಸಬೇಕು ಎಂದ ಅವರು ಈ ಮೇಳದ ಮುಖ್ಯ ಉದ್ದೇಶ ಸರ್ಕಾರದ ಯೋಜನೆ, ಕಾರ್ಯಕ್ರಮ, ತೋಟಗಾರಿಕೆ ಉತ್ಪನ್ನ ಹಾಗೂ ಮಾರುಕಟ್ಟೆಯಲ್ಲಿ ರೈತರಿಗೆ ಬೆಂಬಲ ಬೆಲೆ ಸಿಗಬೇಕು ಎಂಬುದು ಮುಖ್ಯ ಉದ್ದೇಶವಾಗಿದೆ ಎಂದರು.

ಜಿಲ್ಲೆಯ ರೈತರ ಖಾತೆಗೆ ಸುಮಾರು 450 ಕೋಟಿ ರೂ. ಜಮೆ: ಕಳೆದ ವರ್ಷದಲ್ಲಾದ ಅತೀವೃಷ್ಟಿಯಿಂದ 1.65 ಲಕ್ಷ ಹೆಕ್ಟೇರ್ ಬೆಳೆಹಾನಿಯಾಗಿ ರೈತರು ಸಂಕಷ್ಟದಲ್ಲಿದ್ದರು, ಆದರೆ ಸರಕಾರವು ಕಾಳಜಿ ವಹಿಸಿ ಹೆಚ್ಚಿನ ಪರಿಹಾರ ಒದಗಿಸಿದೆ. ಒಟ್ಟು 288 ಕೋಟಿ ರೂಪಾಯಿ 1.92 ಲಕ್ಷ ರೈತರ ಖಾತೆಗೆ ನೇರವಾಗಿ ಜಮೆ ಆಗಿದೆ. ಇದಕ್ಕೆ ಅನುಗುಣವಾಗಿ ಬೆಳೆ ಕಟಾವು ಪ್ರಯೋಗ ಮಾಡಿಸಿ ಈಗಾಗಲೇ 100 ಕೋಟಿ ರೂ. ಬೆಳೆವಿಮೆ ಹಣ ಜಮೆ ಆಗಿದ್ದು, ಇನ್ನು 50 ಕೋಟಿ ರೂ. ಬೆಳೆ ವಿಮೆ ಬರಲಿದೆ. ಒಟ್ಟು 450 ಕೋಟಿ ರೂ. ಜಿಲ್ಲೆಯ ರೈತರ ಖಾತೆಗೆ ನೇರವಾಗಿ ಹಣ ಜಮೆ ಆಗಿದೆ ಎಂದು ಸಚಿವರು ತಿಳಿಸಿದರು.

ರೈತರ ಬೆಳೆಗಳಿಗೆ ಉತ್ತಮ ಮಾರುಕಟ್ಟೆ ಬೆಲೆ ದೊರೆಯಬೇಕು, ರೈತರು ಸಹ ವಿವಿಧ ಬೆಳೆಗಳನ್ನು ಬೆಳೆಯಬೇಕೆಂದರು. ಎಲ್ಲೆಡೆ ಮಾಲಿನ್ಯ ಕಂಡುಬರುತ್ತಿದೆ. ಮಣ್ಣಿನಲ್ಲಿ, ಬೆಳೆಗಳಲ್ಲಿ ರಸಾಯನಿಕಗಳ ಪ್ರಮಾಣ ಹೆಚ್ಚುತ್ತಿದೆ. ರೈತರು ಹೆಚ್ಚು ಸಿರಿಧಾನ್ಯ ಬೆಳೆಯಬೇಕಿದೆ. ಜಿಲ್ಲೆಯಲ್ಲಿ ಕಾರಂಜಾ, ಮೇಕರ ನೀರಾವರಿ ಚಾಲ್ತಿಯಲ್ಲಿದೆ. ಔರಾದ್ ಕೆರೆಗಳನ್ನು ತುಂಬಿಸಲಾಗುವುದು, ಒಟ್ಟಾರೆ ರೈತರ ಅಭಿವೃದ್ಧಿಗೆ ತಾವು ಬದ್ಧರಿದ್ದೇವೆ ಎಂದು ಸಚಿವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ ದಿಲೀಪ್ ಬದೋಲೆ ಪ್ರಾಸ್ತಾವಿಕವಾಗಿ ಮಾತನಾಡಿ, ಉದ್ಯೋಗ ಮೇಳದಲ್ಲಿ 32 ವಿವಿಧ ಕಂಪನಿಗಳು ಭಾಗವಹಿಸಿವೆ, ಉದ್ಯೋಗಾಂಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೊಂದಣಿ ಮಾಡಿಕೊಳ್ಳಲು ಎನ್.ಆರ್.ಎಲ್.ಎಮ್ ಯೋಜನೆಯಿಂದ ಜಿ.ಪಿ.ಎಲ್.ಎಫ್ ಗಳ ಮೂಲಕ ಗ್ರಾಮಗಳಲ್ಲಿ ಪ್ರಚಾರ ನಡೆಸಿ ನೊಂದಣಿಗಾಗಿ ಆನ್‌ಲೈನ್ ಲಿಂಕ್‌ನಲ್ಲಿ ಅವಕಾಶ ನೀಡಲಾಗಿದೆ, ಹೆಚ್ಚಿನ ಸಂಖ್ಯೆಯಲ್ಲಿ ನೊಂದಣಿ ಮಾಡಿಕೊಂಡು ಉದ್ಯೋಗ ಮೇಳದ ಸದುಪಯೋಗ ಪಡೆದುಕೊಳ್ಳಿ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಮೇಳದ ಅಂಗವಾಗಿ ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಗ್ರಾಮೀಣಾಭಿವೃದ್ಧಿ, ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗ ಇಲಾಖೆ ಸೇರಿದಂತೆ ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಖಾಸಗಿ ಸಂಸ್ಥೆಗಳು ಸ್ಥಾಪಿಸಿದ 49 ಮಳಿಗೆಗಳಿಗೆ ಸಚಿವರು ಭೇಟಿ ನೀಡಿ ವೀಕ್ಷಣೆ ನಡೆಸಿದರು.

ವೇದಿಕೆ ಕಾರ್ಯಕ್ರಮ ಚಾಲನೆಗೂ ಮುನ್ನ ನಗರದ ಛತ್ರಪತಿ ಶಿವಾಜಿ ವೃತ್ತದಿಂದ ನೆಹರು ಕ್ರೀಡಾಂಗಣ ವರೆಗೆ ನಡೆದ ಸಿರಿಧಾನ್ಯ ನಡಿಗೆ ಮೆರವಣಿಗೆಗೆ ಬೀದರ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಚಾಲನೆ ನೀಡಿದರು, ಮೆರವಣಿಗೆಯಲ್ಲಿ ಸಿರಿಧಾನ್ಯ ಹೊತ್ತ ಮಹಿಳೆಯರು ಗಮನ ಸೆಳೆದರು.

ಈ ಸಂದರ್ಭದಲ್ಲಿ ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಾಲಾ ನಾರಾಯಣರಾವ, ಬಾಬು ಹೊನ್ನನಾಯ್ಕ, ಅಧ್ಯಕ್ಷರು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣಾ ಮೇಲ್ದಂಡೆ ಯೋಜನೆ (ಕಾಡಾ)ಭೀಮರಾಯನಗುಡಿ ಕಲಬುರಗಿ, ಬೀದರ ಕೃಷಿಕ ಸಮಾಜದ ಜಿಲ್ಲಾಧ್ಯಕ್ಷರಾದ ಸಿದ್ರಾಮಯ್ಯಾ ಸ್ವಾಮಿ, ವಿಶ್ವನಾಥ ಪಾಟೀಲ ಮಾಡಗೊಳ, ರಾಜ್ಯ ಪ್ರತಿನಿಧಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ಬೆಂಗಳೂರು, ಹಣಮಂತ ಚೌಹಾಣ್, ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ, ಬೀದರ ಮಹಾನಗರ ಪಾಲಿಕೆಯ ಆಯುಕ್ತರಾದ ಮುಕುಲ್ ಜೈನ, ಜಂಟಿ ಕೃಷಿ ನಿರ್ದೇಶಕರಾದ ದೇವಿಕಾ, ಮೀನುಗಾರಿಕೆ ಉಪ ನಿರ್ದೇಶಕರಾದ ಜಾನವಿ ಸೇರಿದಂತೆ ಅನೇಕ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.



13ನೆಯ ಕಲಬುರಗಿ ಚಿತ್ರಸಂತೆಗೆ ಅದ್ದೂರಿ ಚಾಲನೆ

ಕಲಬುರಗಿ, ಫೆ.23-

ಕಲೆ ಎಂಬುದು ಬದುಕಿನ ಅಭಿವ್ಯಕ್ತಿ. ಜಿಲ್ಲೆಯಲ್ಲಿ ನಾಟಕೋತ್ಸವ ಮತ್ತು ಚಿತ್ರಸಂತೆಗಳು ಏಕಕಾಲದಲ್ಲಿ ನಡೆಯುತ್ತಿರುವುದು ಕಲಾ ಪ್ರೇಮಿಗಳಿಗೆ ಹಬ್ಬದಂತಾಗಿದೆ ಎಂದು ಜಿಲ್ಲಾಧಿಕಾರಿ ಬಿ.ಫೌಝಿಯಾ ತರನ್ನುಮ್ ಹೇಳಿದರು.

ನಗರದಲ್ಲಿ ರವಿವಾರ ಕನ್ನಡ ಭವನದ ಆವರಣದಲ್ಲಿರುವ ಬಾಪೂಗೌಡ ದರ್ಶನಾಪುರ ರಂಗಮಂದಿರದಲ್ಲಿ ದೃಶ್ಯಬೆಳಕು ಸಾಂಸ್ಕೃತಿಕ ಸಂಸ್ಥೆ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರುಗಳ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ 13ನೇ ಕಲಬುರಗಿ ಚಿತ್ರ ಸಂತೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜಿಲ್ಲೆಯು ಪ್ರತಿಭೆಗಳ ಗಣಿಯಾಗಿದ್ದು, ಇಲ್ಲಿನ ಕಲಾವಿದರಲ್ಲಿ ಅದ್ಭುತವಾದ ಹುಮ್ಮಸ್ಸು ಮತ್ತು ಕಲಾ ನೈಪುಣ್ಯತೆ ಇದೆ. ಇಂತಹ ವೇದಿಕೆಗಳು ಕಲಾವಿದರ ಪ್ರತಿಭೆಯನ್ನು ಜಗತ್ತಿಗೆ ಪರಿಚಯಿಸಲು ಸಹಕಾರಿಯಾಗುತ್ತವೆ ಎಂದರು.

ಹಿರಿಯ ಚಿತ್ರಕಲಾವಿದರು ಮತ್ತು ಚೈತನ್ಯಮಯ ಟ್ರಸ್ಟ್ ನಿರ್ದೇಶಕ ಎ.ಎಸ್ ಪಾಟೀಲ, ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಶರಣಬಸಪ್ಪ ಪಪ್ಪಾ, ಬಿಸಿಲು ಆರ್ಟ ಗ್ಯಾಲರಿ ಮುಖ್ಯಸ್ಥ ವಿ. ಬಿ. ಬಿರಾದಾರ ಮಾತನಾಡಿದರು.

ಈ ಸಂದರ್ಭದಲ್ಲಿ ಹಿರಿಯ ಕಲಾವಿದರು ಮತ್ತು ಕರ್ನಾಟಕ ಲಲಿತಕಲ ಅಕಾಡೆಮಿ ಸದಸ್ಯ ಬಸವರಾಜ್ ಎಲ್. ಜಾನೆ, ರೋಟರಿ ಕ್ಲಬ್ ಆಫ್ ಗುಲಬರ್ಗಾ ನಾರ್ಥ ಅಧ್ಯಕ್ಷ ಆನಂದ ದಂಡೋತಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ್ ತೇಗಲತಿಪ್ಪಿ, ಖ್ಯಾತ ವಾಣಿಜ್ಯೋದ್ಯಮಿ ರಾಧೇಶ್ಯಾಮ ಠಾಕೂರ, ದಿ ಆರ್ಟ್ ಇಂಟ್ರಿಗೇಶನ್ ಫೈನ್ ಆರ್ಟ್ ಕಾಲೇಜ್ ಪ್ರಾಚಾರ್ಯ ಎಮ್.ಎಚ್ ಬೆಳಮಗಿ, ಸಂಯೋಜಕ ಡಾ. ಪರಶುರಾಮ್ ಪಿ. ಉಪಸ್ಥಿತರಿದ್ದರು.

ಪ್ರೇಕ್ಷಕರ ಮನಸೆಳೆದ 'ಕರಿಮಾಯಿ ಮಾಯೆ' ನಾಟಕ



ಕಲಬುರಗಿ,ಫೆ 22-

ಸ್ಪಂದನ ಬೆಂಗಳೂರು ಕಲಾತಂಡ ಅಭಿನಯಿಸಿದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ್ ಕಂಬಾರರ ಮೂಲ ಕೃತಿಯ ಕರಿಮಾಯಿ ನಾಟಕ ಕಲಬುರಗಿ ನಾಟಕೋತ್ಸವ - 26 ರ ಪ್ರಾರಂಭದ ದಿನ ಜನ-ಮನ ಸೆಳೆಯಿತು.

ನಗರದ ಡಾ.ಎಸ್ ಎಮ್ ಪಂಡಿತ್ ರಂಗಮಂದಿರದಲ್ಲಿಂದು ಹಮ್ಮಿಕೊಳ್ಳಲಾಗಿದ್ದ ಕಲಬುರಗಿ ನಾಟಕೋತ್ಸವ - 26 ಕ್ಕೆ ಚಾಲನೆ ನೀಡಿದ ನಂತರ ಹಮ್ಮಿಕೊಳ್ಳಲಾಗಿದ್ದ ಮೊದಲ ಪ್ರದರ್ಶನ ಕರಿಮಾಯಿ ನಾಟಕವನ್ನು ನಿರ್ದೇಶನ ಮಾಡಿ ಹಿನ್ನಲೆ ಮೇಳದ ಮುಖ್ಯ ಗಾಯಕರಾಗಿ ಜನರ ಮನಸೂರೆ ಮಾಡಿದರು ಹಿರಿಯ ರಂಗಕರ್ಮಿ ಹಾಗೂ ಚಿತ್ರನಟಿ ಬಿ ಜಯಶ್ರೀಯವರು.

ನಾಟಕದ ಮುಖ್ಯಪಾತ್ರದಲ್ಲಿ ರಂಗಭೂಮಿ, ಸಿನಿಮಾ ಹಾಗೂ ಕಿರುತೆರೆ ಖ್ಯಾತನಟ ರಮೇಶ ಪಂಡಿತ್ ಸೇರಿದಂತೆ ಹಲವಾರು ನಟ-ನಟಿಯರು ಕಿರುತೆರೆ ಸೇರಿದಂತೆ ಸಿನಿಮಾಗಳಲ್ಲಿ ಅಭಿನಯಿಸಿದ ಮುಖಗಳನ್ನು ಈ ನಾಟಕದಲ್ಲಿ ನೋಡಿದ ಕಲಬುರಗಿ ಜನರಿಗೆ ತಮ್ಮ ನೆಚ್ಚಿನ ನಟರನ್ನು ಮುಖತಃ ಭೇಟಿ ಮಾಡಿದ ಸಂತಸ ಎದ್ದು ಕಾಣುತ್ತಿತ್ತು.

ಡಾ. ಚಂದ್ರಶೇಖರ ಕಂಬಾರರ 'ಕರಿಮಾಯಿ' ಕನ್ನಡ ಸಾಹಿತ್ಯ ಮತ್ತು ರಂಗಭೂಮಿ ಲೋಕದ ಒಂದು ಅದ್ಭುತ ಸೃಷ್ಟಿ. ಇದು ಕೇವಲ ಒಂದು ನಾಟಕವಲ್ಲ, ಕರಿಮಾಯಿ ಮುಖ್ಯವಾಗಿ ಹಳ್ಳಿಗಾಡಿನ ನಂಬಿಕೆ, ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷವನ್ನು ಬಿಂಬಿಸುವ ಒಂದು ಜಾನಪದ ಮಹಾಕಾವ್ಯವಾಗಿದೆ.

'ಕರಿಮಾಯಿ' ನಾಟಕವು ಉತ್ತರ ಕರ್ನಾಟಕದ ಜಾನಪದ ಸೊಗಡಿನೊಂದಿಗೆ ಸಾಗುತ್ತಿದೆ. ಇದು ಶಿವಪುರ ಎಂಬ ಕಾಲ್ಪನಿಕ ಗ್ರಾಮದಲ್ಲಿ ನಡೆಯುವ ಕಥೆ. ಇಲ್ಲಿನ ಜನರ ಬದುಕು ಆ ಗ್ರಾಮದ ದೇವತೆ 'ಕರಿಮಾಯಿ'ಯ ಸುತ್ತ ಹೆಣೆದಿದೆ. ಗ್ರಾಮದ ನಂಬಿಕೆಗಳು, ಆಚರಣೆಗಳು ಮತ್ತು ಜನರ ನಡುವಿನ ಸಂಬಂಧಗಳನ್ನು ಕಂಬಾರರು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಈ ನಾಟಕವು ಹಲವು ಆಯಾಮಗಳಲ್ಲಿ ತೆರೆದುಕೊಳ್ಳುತ್ತಾ ಜನ-ಜೀವನದ ಕನ್ನಡಿಯಾಗಿ ಪ್ರೇಕ್ಷಕರನ್ನು ಚಿಂತನೆಗೆ ಹಚ್ಚುತ್ತದೆ.

ಸಂಪ್ರದಾಯ ಮತ್ತು ಆಧುನಿಕತೆ ಸೇರಿದಂತೆ ಹಳೆಯ ತಲೆಮಾರಿನ ನಂಬಿಕೆಗಳು ಮತ್ತು ಹೊಸ ತಲೆಮಾರಿನ ತರ್ಕಬದ್ಧ ಆಲೋಚನೆಗಳ ನಡುವಿನ ಸಂಘರ್ಷ ನಾಟಕದಲ್ಲಿ ಎದ್ದು ಕಾಣುತ್ತದೆ.

ಅಧಿಕಾರ ಮತ್ತು ರಾಜಕೀಯ ಹಳ್ಳಿ ಮುಗ್ಧ ಜನರ ನಡುವೆ ಗ್ರಾಮದ ಮುಖಂಡರ ನಡುವಿನ ಅಧಿಕಾರದ ಹಪಾಹಪಿ, ಪಿತೂರಿಗಳು ಮತ್ತು ಅದು ಸಾಮಾನ್ಯ ಜನರ ಮೇಲೆ ಬೀರುವ ಪ್ರಭಾವವನ್ನು ನಾಟಕ ಅದ್ಭುತವಾಗಿ ಕಟ್ಟಿಕೊಡುತ್ತದೆ.

ನಾಟಕದುದ್ದಕ್ಕೂ ಬರುವ ಹಾಡುಗಳು, ಲಾವಣಿಗಳು ಮತ್ತು ಗ್ರಾಮ್ಯ ಭಾಷೆಯ ಬಳಕೆ ಪ್ರೇಕ್ಷಕರನ್ನು ಒಂದು ವಿಭಿನ್ನ ಲೋಕಕ್ಕೆ ಕರೆದೊಯ್ಯುತ್ತದೆ. ಅದರಲ್ಲೂ ಬಿ ಜಯಶ್ರೀ ದ್ವನಿ ಮತ್ತು ಹಿನ್ನಲೆ ಮೇಳದ ಸಂಗೀತ ಜನರಿಗೊಂದು ಗುಂಗು ಸೃಷ್ಟಿಸುತ್ತದೆ.

ಕರಿಮಾಯಿ ದೇವತೆ ಇಲ್ಲಿ ಕೇವಲ ಕಲ್ಲಿನ ವಿಗ್ರಹವಲ್ಲ, ಅವಳೊಂದು ಗ್ರಾಮದ ಆತ್ಮಸಾಕ್ಷಿಯ ಸಂಕೇತವಾಗಿ ಕಾಣಿಸಿಕೊಳ್ಳುತ್ತಾಳೆ.

ಬಿ ಜಯಶ್ರೀಯವರ ನಿರ್ದೇಶನದ ಈ ನಾಟಕದಲ್ಲಿ ಬಯಲಾಟ ಮತ್ತು ಸಣ್ಣಾಟಗಳ ತಂತ್ರವನ್ನು ಬಳಸಿಕೊಂಡಿದ್ದಾರೆ. ಸೂತ್ರಧಾರರ ಪಾತ್ರಗಳು ಕಥೆಯನ್ನು ಮುನ್ನಡೆಸುವ ರೀತಿ ಅನನ್ಯವಾಗಿದೆ. 'ಕರಿಮಾಯಿ' ನಾಟಕವು ಬದಲಾಗುತ್ತಿರುವ ಕಾಲಘಟ್ಟದಲ್ಲಿ ಮನುಷ್ಯನ ಮೌಲ್ಯಗಳು ಹೇಗೆ ಕುಸಿಯುತ್ತಿವೆ ಮತ್ತು ಮೂಲ ಬೇರುಗಳಿಂದ ಮನುಷ್ಯ ಹೇಗೆ ದೂರವಾಗುತ್ತಿದ್ದಾನೆ ಎಂಬುದನ್ನು ಕನ್ನಡಿಯಂತೆ ಹಿಡಿದು ತೋರಿಸುತ್ತದೆ.

ನಾಳೆ ಫೆ. 22 ರಂದು ಪಂಡಿತ್ ರಂಗಮಂದಿರದಲ್ಲಿ ಸಂಜೆ 7 ಗಂಟೆಗೆ ಅಜಿತೇಶ್ ಗುಪ್ತಾ ಮತ್ತು ಮೋಹಿತ್ ಅಗರ್ವಾಲ್ ನಿರ್ದೇಶನದ ಜೋ ಡೂಬಾ ಸೋ ಪಾರ್ ಹಿಂದಿ ಮತ್ತು ಉರ್ದು ಭಾಷೆಯ ನಾಟಕ ಮುಂಬೈನ ಅರಣ್ಯ ಥಿಯೇಟರ್ ಗ್ರೂಪ್ ಪ್ರಸ್ತುತಪಡಿಸಲಿದೆ. ಕಲಬುರಗಿ ನಾಟಕೋತ್ಸವ - 26 ರ ಅಂಗವಾಗಿ ಫೆ. 22 ಮತ್ತು 23 ರಂದು ಮಕ್ಕಳಿಗಾಗಿ ಕಲಬುರಗಿ ರಂಗಾಯಣದಲ್ಲಿ ರಂಗ ಶಂಕರ ನಿರ್ಮಾಣದ ಮತ್ತು ಸುರೇಂದ್ರನಾಥ ಎಸ್. ನಿರ್ದೇಶನದ ಸರ್ಕಲ್ ಆಫ್ ಲೈಫ್, ಮಾತಿಲ್ಲದ ಪಪೆಟ್ ನಾಟಕ ಇರಲಿದೆ.

ಕೆರೆ ದುರಸ್ತಿ, ಸೇತುವೆ ಕಾಮಗಾರಿಗೆ ಶಾಸಕ ಪ್ರಭು ಚವ್ಹಾಣ ಚಾಲನೆ



ಔರಾದ್, ಫೆ.23-

ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಾಲ್ಲೂಕಿನ ಯನಗುಂದಾ ಗ್ರಾಮದ ಬಳಿ ಸೇತುವೆ, ಬೋಂತಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಕೆರೆ ದುರಸ್ತಿ ಕಾಮಗಾರಿಗಳಿಗೆ ಫೆ.22ರಂದು ಶಂಕುಸ್ಥಾಪನೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಪ್ರತಿ ಮಳೆಗಾಲದಲ್ಲಿ ದೊಡ್ಡ ಮಟ್ಟದ ಅಡಚಣೆ ಉಂಟಾಗುತ್ತಿದ್ದ ಹಿನ್ನೆಲೆಯಲ್ಲಿ ಯನಗುಂದಾ ಗ್ರಾಮದ ಬಳಿ ಸೇತುವೆ ನಿರ್ಮಾಣದ ಅಗತ್ಯತೆ ಬಹಳ ದಿನಗಳಿಂದ ಕೇಳಿಬರುತ್ತಿತ್ತು. ಕಳೆದ ಮಳೆಗಾಲದ ಸಂದರ್ಭದಲ್ಲಿ ತೀವ್ರ ಮಳೆಯಿಂದಾಗಿ ಸೇತುವೆ ಮುಚ್ಚಿ ಹೋಗಿರುವುದರಿಂದ ಸಾಕಷ್ಟು ದಿನ ಈ ರಸ್ತೆಯ ಮೇಲೆ ಸಂಪೂರ್ಣ ಸಂಚಾರ ಸ್ಥಗಿತಗೊಂಡು ಶಾಲಾ ಮಕ್ಕಳು, ರೈತರು ಹಾಗೂ ಸಾರ್ವಜನಿಕರಿಗೆ ಸಾಕಷ್ಟು ಅನಾನುಕೂಲ ಆಗಿತ್ತು.

ನಂತರ ಸರ್ಕಾರದ ಮೇಲೆ ನಿರಂತರ ಒತ್ತಡ ತಂದು ಸೇತುವೆಗೆ 3 ಕೋಟಿ ಅನುದಾನ ತಂದಿದ್ದು, ಇದೀಗ ಸೇತುವೆ ನಿರ್ಮಾಣವಾಗುವುದರಿಂದ ಗ್ರಾಮಸ್ಥರ ಸಂಚಾರ ಸುಗಮವಾಗಲಿದೆ. ರೈತರ ಕೃಷಿ ಉತ್ಪನ್ನಗಳ ಸಾಗಣೆಗೆ ಸಹಾಯವಾಗಲಿದೆ. ಕಾಮಗಾರಿ ಗುಣಮಟ್ಟದಲ್ಲಿ ಯಾವುದೇ ತೊಡಕು ಬರದಂತೆ ಅಧಿಕಾರಿಗಳು ಕಾಳಜಿ ವಹಿಸಬೇಕು ಎಂದು ಸೂಚಿಸಿದರು.

ಇದಕ್ಕೂ ಮುನ್ನ ರಾಮಸಿಂಗ್ ನಾಯಕ್ ತಾಂಡಾ ಬಳಿ ಅತ್ಯಧಿಕ ಮಳೆಯಿಂದ ಕೊಚ್ಚಿಕೊಂಡು ಹೋಗಿದ್ದ ಕೆರೆ ದುರಸ್ತಿಯ 1.5 ಕೋಟಿ ಮೊತ್ತದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ಈ ಭಾಗದಲ್ಲಿ ಜನ ಜಾನುವಾರುಗಳಿಗೆ ನೀರಿನ ಮೂಲವಾಗಿದ್ದ ಕೆರೆ ಕೊಚ್ಚಿಕೊಂಡು ಹೋಗಿದ್ದರಿಂದ ಬೇಸಿಗೆ ಅವಧಿಯಲ್ಲಿ ನೀರಿನ ಅಭಾವ ಉಂಟಾಗುವ ಭೀತಿ ಎದುರಾಗಿತ್ತು. ಆದ್ದರಿಂದ ಬಹಳಷ್ಟು ಒತ್ತು ಕೊಟ್ಟು ಶಿಥಿಲಗೊಂಡ ಎಲ್ಲ ಕೆರೆಗಳ ದುರಸ್ತಿಗಾಗಿ ಸರ್ಕಾರಕ್ಕೆ ಪತ್ರ ಬರೆದಿದ್ದು, ನಿರಂತರ ಒತ್ತಡ ಹೇರುತ್ತಾ ಬರುತ್ತಿದ್ದೇನೆ. ಇದೀಗ ಕೆರೆ ನಿರ್ಮಾಣ ಆರಂಭವಾಗಿದ್ದು ಜನತೆಗೆ ಸಂತೋಷವಾಗಿದೆ. ಬೇಸಿಗೆ ಅವಧಿಯಲ್ಲಿ ಜನ-ಜಾನುವಾರುಗಳಿಗೆ ವರದಾನವಾಗಿ ಪರಿಣಮಿಸುವ ಕೆರೆಯ ಕಾಮಗಾರಿ ಅತ್ಯಂತ ಗುಣಮಟ್ಟದಿಂದ ಮಾಡಬೇಕು. ಕಾಮಗಾರಿಯ ಬಗ್ಗೆ ಯಾವುದೇ ರೀತಿಯ ದೂರುಗಳು ಬಾರದ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಗ್ರಾಮೀಣ ಭಾಗದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ನಾನು ಸದಾ ಬದ್ಧನಾಗಿದ್ದು, ಜನತೆಗೆ ಅತ್ಯವಶ್ಯಕವಿರುವ ಎಲ್ಲ ಅಭಿವೃದ್ಧಿ ಕೆಲಸಗಳನ್ನು ಆದ್ಯತೆಯ ಮೇರೆಗೆ ಮಾಡುತ್ತಾ ಬಂದಿದ್ದೇನೆ. ಬಾಕಿ ಉಳಿದಿರುವ ಎಲ್ಲ ಕೆಲಸಗಳನ್ನು ಹಂತ ಹಂತವಾಗಿ ಮಾಡುತ್ತೇನೆ ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಮುಖಂಡರಾದ ರಾಮಶೆಟ್ಟಿ ಪನ್ನಾಳೆ, ಧೊಂಡಿಬಾ ನರೋಟೆ, ಶಿವರಾಜ ಅಲ್ಮಾಜೆ, ಖಂಡೋಬಾ ಕಂಗಟೆ, ಪ್ರತೀಕ ಚವ್ಹಾಣ, ಶಿವಕುಮಾರ ಮಜಗೆ, ನಾಗನಾಥ ಲಕ್ಕಾ, ರಮೇಶ ಗೌಡಾ, ಜಗದೀಶ ಪಾಟೀಲ, ಅಶೋಕ ಅಲ್ಮಾಜೆ, ಶಿವಕುಮಾರ ಪಾಟೀಲ, ಸೂರ್ಯಕಾಂತ ಅಲ್ಮಾಜೆ, ನಾಗನಾಥ ಬಿರಾದಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಗೋಶಾಲೆಯಿಂದ ಸಮಾಧಾನ, ನೆಮ್ಮದಿ ಸಿಗುತ್ತದೆ : ಸಂಸದ ಇ.ತುಕಾರಾಂ



ಬಳ್ಳಾರಿ / ಕಂಪ್ಲಿ , ಫೆ.23-

ಗೋಶಾಲೆಯಿಂದ ಮನಸ್ಸಿಗೆ ಸಮಾಧಾನ ಹಾಗೂ ಜೀವನದಲ್ಲಿ ನೆಮ್ಮದಿ ದೊರೆಯುತ್ತದೆ ಎಂದು ಸಂಸದ ಇ.ತುಕಾರಾಂ ಹೇಳಿದರು.

ತಾಲೂಕಿನ ದೇವಸಮುದ್ರ ಕ್ರಾಸ್ ಹೊರವಲಯದಲ್ಲಿರುವ ಕಲ್ಯಾಣಚೌಕಿ ಮಠ ಕಾಮಧೇನು ಗೋಶಾಲ ಸೇವಾ ಟ್ರಸ್ಟ್ ಆಶ್ರಯದಲ್ಲಿ ನಡೆಯುತ್ತಿರುವ ಗೋಶಾಲೆ, ಕಲ್ಯಾಣ ಕೃಷಿ ಆಶ್ರಮ ಹಾಗೂ ಗುರುಕುಲ ಶಿಕ್ಷಣ ಉದ್ಘಾಟನಾ ಕಾರ್ಯಕ್ರಮದ ಅಂಗವಾಗಿ ಭಾನುವಾರ ನಡೆದ ವಿಶೇಷ ಪೂಜೆ ಹಾಗೂ ಹೋಮಹವನದಲ್ಲಿ ಭಾಗ ವಹಿಸಿ ಅವರು ಮಾತನಾಡಿದರು.

ಬಾಲ್ಯದಿಂದಲೂ ಕೃಷಿ ಕಾರ್ಯಗಳ ಜೊತೆಗೆ ಗೋಮಾತೆಯ ಪೂಜೆ ಮಾಡುತ್ತಾ ದಿನನಿತ್ಯದ ಜೀವನ ಸಾಗಿಸುತ್ತಿದ್ದೇವೆ. ಗೋಶಾಲೆ, ಕೃಷಿ ಆಶ್ರಮ ಮತ್ತು ಗುರುಕುಲ ಶಿಕ್ಷಣವು ಪವಿತ್ರ ಕಾರ್ಯಗಳಾಗಿವೆ. ಮನೆಯಲ್ಲಿ ಗೋವುಗಳಿದ್ದರೆ ಆಕ್ಸಿಜನ್ ದೊರೆಯುತ್ತದೆ, ರೋಗಗಳು ಹತ್ತಿರ ಬರುವುದಿಲ್ಲ ಎಂಬ ನಂಬಿಕೆ ಇದೆ ಎಂದು ಹೇಳಿದರು.

ವಿಜಯನಗರ ಸೇರಿ ಬಳ್ಳಾರಿ ಲೋಕಸಭಾ ಕ್ಷೇತ್ರದ ಅಭಿವೃದ್ಧಿಗೆ ಈಗಾಗಲೇ ಸುಮಾರು 4600 ಕೋಟಿ ರೂ. ಅನುದಾನ ತಂದು ವಿನಿಯೋಗಿಸಲಾಗಿದೆ. ತಮ್ಮ 5 ಕೋಟಿ ರೂ. ಅನುದಾನದಲ್ಲಿ ಅಂಗವಿಕಲಚೇತನರಿಗೆ ಸೌಲಭ್ಯಗಳು, ಡಿಜಿಟಲ್ ಗ್ರಂಥಾಲಯ ಸೇರಿದಂತೆ ವಿವಿಧ ಸೌಕರ್ಯಗಳನ್ನು ಒದಗಿಸಲಾಗಿದೆ. ರೈಲ್ವೆ ಕ್ಷೇತ್ರದಲ್ಲೂ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀಕಲ್ಯಾಣಚೌಕಿ ಮಠ ಕಾಮಧೇನು ಗೋಶಾಲಾ ಸೇವಾ ಟ್ರಸ್ಟ್ ಸಂಸ್ಥಾಪಕ ಕೆ.ಎಂ. ಬಸವರಾಜ ಸ್ವಾಮಿ ಅವರು ಸಂಸದ ತುಕಾರಾಂ ಅವರಿಗೆ ಸನ್ಮಾನಿಸಿದರು. ಸಾವಯವ ದವಸಧಾನ್ಯ ಹಾಗೂ ಇತರ ವಸ್ತುಗಳ ಪ್ರದರ್ಶನವನ್ನು ವೀಕ್ಷಿಸಿದ ಸಂಸದರು ಕೆಲವು ವಸ್ತುಗಳನ್ನು ಖರೀದಿ ಮಾಡಿ ವ್ಯಾಪಾರಸ್ಥರಿಗೆ ಪ್ರೋತ್ಸಾಹ ನೀಡಿದರು.

ಕಾರ್ಯಕ್ರಮದಲ್ಲಿ ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಪಿ. ಮೂಕಯ್ಯಸ್ವಾಮಿ, ಪುರಸಭೆ ಮಾಜಿ ಅಧ್ಯಕ್ಷ ಎಂ. ಸುಧೀರ್, ಮುಖಂಡರಾದ ಬಿ. ನಾರಾಯಣಪ್ಪ, ಹೊನ್ನಳ್ಳಿ ಗಂಗಾಧರ, ನಾಯಕರ ವೆಂಕೋಬ, ದೊಡ್ಡಬಸಪ್ಪ, ಹನುಮಂತಪ್ಪ, ಜಿ. ಮರೇಗೌಡ, ಸಿದ್ದಯ್ಯ, ಎನ್.ಎಂ. ಪತ್ರಯ್ಯಸ್ವಾಮಿ, ಅಕ್ಕಿ ಜಿಲಾನ್, ಬಳೆ ಮಲ್ಲಿಕಾರ್ಜುನ ಸೇರಿದಂತೆ ಸ್ವಾಮೀಜಿ, ಭಕ್ತರು ಹಾಗೂ ಹಲವರು ಉಪಸ್ಥಿತರಿದ್ದರು.

ನಾಯ್ಕಲ್ ಗ್ರಾಮದ ಬೂತ್ 123, ಮತ್ತು 124, ಬೂತ್ ಕಾರ್ಯಕರ್ತರೊಂದಿಗೆ ಮನ್ ಕೀ ಬಾತ್ ವೀಕ್ಷಣೆ



ಯಾದಗಿರಿ, ಫೆ.22-

ಪ್ರತಿ ತಿಂಗಳ ಕೊನೆಯ ಭಾನುವಾರದಂದು ನಾವೆಲ್ಲರೂ ಎದುರು ನೋಡುವ ನಮ್ಮ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ಮನ್ ಕೀ ಬಾತ್ ಕಾರ್ಯಕ್ರಮದ 131ನೇ ಸಂಚಿಕೆಯನ್ನು ಯಾದಗಿರಿ ವಿಧಾನಸಭಾ ಕ್ಷೇತ್ರದ ನಾಯ್ಕಲ್ ಗ್ರಾಮದಲ್ಲಿ ಶಕ್ತಿಕೇಂದ್ರ ಅಧ್ಯಕ್ಷರಾದ ವೆಂಕಟರೆಡ್ಡಿ ಗೊಸ್ವಾಮಿ ರವರ ಮನೆಯಲ್ಲಿ 123, ಮತ್ತು 124, ಬೂತ್ ಮಟ್ಟದ ಪದಾಧಿಕಾರಿಗಳು ಹಾಗೂ ನಮ್ಮ ಎಲ್ಲಾ ಕಾರ್ಯಕರ್ತರೊಡಗೂಡಿ ಪಕ್ಷದ ಹಿರಿಯ ಮುಖಂಡರೊಂದಿಗೆ ವೀಕ್ಷಿಸಲಾಯಿತು..

?ಈ ಸಂದರ್ಭದಲ್ಲಿ ಮನ್ ಕೀ ಬಾತ್ ಕಾರ್ಯಕ್ರಮ ವೀಕ್ಷಿಸಿ ಮಾತನಾಡಿದ ?ಬಿಜೆಪಿ ಹಿರಿಯ ಮುಖಂಡರಾದ ರಾಚನಗೌಡ ಮುದ್ನಾಳ ಭಾಷೆಯ ವೈವಿಧ್ಯದಿಂದ ಸಂಪ್ರದಾಯಗಳ ವೈಭವವರೆಗೆ, ವಿಜ್ಞಾನ ಸಾಧನೆಗಳಿಂದ ಪರಂಪರೆಯ ಗರ್ವವರೆಗೆ, ವಿದೇಶಗಳಲ್ಲಿ ಭಾರತೀಯ ಸಂಸ್ಕೃತಿಯ ಕೀರ್ತಿಯಿಂದ ರೈತರ ಪರಿಶ್ರಮದವರೆಗೆ, ಮಹಿಳಾ ಶಕ್ತಿ ಮತ್ತು ಯುವಕರ ಆಕಾಂಕ್ಷೆಗಳವರೆಗೆ, ಯೋಗ'ಆಯುರ್ವೇದ'ದಿಂದ ಆರೋಗ್ಯದ ಸಂದೇಶವರೆಗೆ, ಸ್ವಚ್ಛತೆಯಿಂದ ತ್ರಿವರ್ಣದ ಗರ್ವವರೆಗೆ ಮತ್ತು ಸ್ವಾವ'ಲಂಬನೆ'ಯಿಂದ' ಅಭಿವೃದ್ಧಿಶೀಲ ಭಾರತದ ಕನಸುವರೆಗೆ ಅನೇಕ ವಿಷಯಗಳನ್ನು ಸ್ಪರ್ಶಿಸುವ ''ಮನ್ ಕಿ ಬಾತ್'' ಕಾರ್ಯಕ್ರಮವನ್ನು ಆಲಿಸುವುದು ಸದಾ ವಿಶೇಷ ಹಾಗೂ ಪ್ರೇ'ರ'ಣಾದಾಯಕ' ಅನುಭವವಾಗಿದೆ ಎಂದು ಹೇಳಿದರು. ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶ್ರೀ ಧರ ಸಾಹುಕಾರ ಮಾತನಾಡಿ, ಶ್ರೀಸಾಮಾನ್ಯರ ಸಾಧನೆಗಳನ್ನು ಪರಿಚಯಿಸುತ್ತಲೇ ವಿಕಸಿತ ಭಾರತದ ನಿರ್ಮಾಣಕ್ಕೆ ಪ್ರೇರಣೆ ನೀಡುವ ಆದರಣೀಯ ಪ್ರಧಾನಮಂತ್ರಿಗಳ ಮಾತುಗಳು, ಎಂದಿನಂತೆ ನಮ್ಮೆಲ್ಲರಲ್ಲಿ ಹೊಸ ಹುರುಪು ಮತ್ತು ಚೈತನ್ಯವನ್ನು ಮೂಡಿಸಿದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ನಗರಾಭಿರುದ್ದಿ ಪ್ರಾಧಿಕಾರ ಅಧ್ಯಕ್ಷ ಬಸವರಾಜ ಚಂಡ್ರಿಕಿ, ಪ್ರಕಾಶ್ ಹಳಿಮನಿ, ಸುರೇಶ ದ್ಯಾಪುರ,ಶರಣಭೂಪಾಲರಡ್ಡಿ ಗೋಸಾಯಿ,ವಿರುಪಾಕ್ಷರಡ್ಡಿ ಹೀರೆಗೌಡ',ಮಲ್ಲಣ್ಣಗೌಡ' ವಡ್ಡಗಿ, ಬಸವರಾಜ ಮೇತ್ರೆ,ಮೈಪಾಲರಡ್ಡಿ ಹಿರೆಬಿರಿ, ಸಂತೋಷ ವಡವಡಗಿ, ಮಲ್ಲಮ್ಮ ಗುತ್ತೆದಾರ',ಈಶಪ್ಪ,ಚನ್ನಪ ತಳವಾರ, ವಿಜಯಕುಮಾರ್ ಸಾಹುಕಾರ ಚೆಟ್ನಳ್ಳಿ,ಶಾಂತಗೌಡ ಬಲಕಲ್,ಗುರಣ್ಣಗೌಡ ಬಲಕಲ್, ಆನಂದ ಸ್ವಾಮಿ ಚೆಟ್ನಳ್ಳಿ,ಸಾಬಣ್ಣ ಭ'ಜಂತ್ರಿ, ಸುರೇಶಗೌಡ,ಮಹದೇವಪ್ಪ ಮಾಯಿ,ವೆಂಕಟರೆಡ್ಡಿ ಪಸಪುಲ್,

ಸುರೇಶ್ ಮುದ್ನಾಳ, ಶರಣಗೌಡ ಅಲಿಪುರ್, ಶಿವರಾಜ ದಾಸನಕೇರಿ, ಭೀಮರೆಡ್ಡಿ ಚಟ್ನಳ್ಳಿ, ರಾಮು ರಾಠೋಡ್ ಸಿ.ಮಲ್ಲು ಕೋಲಿವಾಡ, ಚಂದ್ರು ಕಡೇಚೂರು, ಹಣಮಂತ ವಲ್ಯಪೂರೆ, ಅನಿಲ್ ಕರಾಟೆ, ವಿಕಾಸ್ ಚವ್ಹಾಣ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಕಣ್ಣುಗಳ ಆರೈಕೆಗೆ ನಾವೆಲ್ಲರೂ ಮಹತ್ವ ನೀಡೋಣ: ಡಾ.ಸುರೇಂದ್ರ ಬಾಬು

ಡಾ.ಗೀತಾಮಣಿ, ಲಾತೂರ್‌ನ ಎಂಐಎಎಸ್‌ಆರ್ ವೈದ್ಯಕೀಯ ಕಾಲೇಜಿನ ಸಮುದಾಯ ಔಷಧ ಪ್ರಾಧ್ಯಾಪಕ ಡಾ.ಅನಂತ್ ಟಕಲ್ಕರ್ ಅವರು ಉಪನ್ಯಾಸ ನೀಡಿದರು.

ಇದೇ ಸಂದರ್ಭದಲ್ಲಿ ನವೋದಯ ವೈದ್ಯಕೀಯ ಕಾಲೇಜು ಆಡಳಿತ ಮಂಡಳಿಯ ನಿರ್ದೇಶಕರು ಡಾ.ಅಮೃತ ರೆಡ್ಡಿ, ನೇತ್ರವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ.ಅನುಪಮಾ ತಕ್ಲಿಕರ್, ಕೆಎಂಸಿ ವೀಕ್ಷಕ ಇಎನ್‌ಟಿ ಶಸ್ತ್ರಚಿಕಿತ್ಸಕ ಡಾ.ವಾಸುದೇವ್ ಜಹಗೀರ್ದಾರ್, ವೈದ್ಯಕೀಯ ಅಧಿಕ್ಷಕರು ಡಾ.ಅರುಣ್ ಕೆ ಎಸ್, ಪ್ರಭಾರಿ ಪ್ರಾಂಶುಪಾಲರು ಡಾ.ವಿಶಾಲ್ ಸಾಳ್ವೆ, ಆರ್‌ಎಂಒ ಡಾ.ನಾರಾಯಣ ಪೆಂಡ್ಲಿಕಲ್, ನೇತ್ರವಿಜ್ಞಾನ ವಿಭಾಗದ ಪ್ರಾಧ್ಯಾಪಕಿ ಡಾ.ಶರಣಬಸಮ್ಮ, ಡಾ.ರೇಷ್ಮಾ, ಕಾರ್ಯಕ್ರಮದ ಸಂಘಟನಾ ಕಾರ್ಯದರ್ಶಿ ಡಾ.ಲವನ್ ಕುಮಾರ್, ಸಹಾಯಕ ಪ್ರಾಧ್ಯಾಪಕರಾದ ಡಾ.ಕಾಂಚನಾ ಬಿ ಕೆ, ಡಾ.ವೈಭವ, ಡಾ.ಶ್ವೇತಾ ಜಿ, ಡಾ.ಅಪೂರ್ವ ಡಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಗುರು ಗಂಪಾ ಸೇರಿದಂತೆ ಇತರರು ಇದ್ದರು.

ಸಿರವಾರನ್ನು ಸಿಂಧನೂರಿಗೆ ಸೇರಿಸುವುದನ್ನು ಖಂಡಿಸಿ ಉಗ್ರ ಹೋರಾಟ

80 ಕಿ.ಮೀ ದೂರದ ಸಂಚಾರ ವ್ಯವಸ್ಥೆ ಸಮರ್ಪಕವಾಗಿಲ್ಲ.

8. ಅವೈಜ್ಞಾನಿಕ ನಿರ್ಧಾರ:

ಭೌಗೋಳಿಕ, ಸಾಮಾಜಿಕ, ಆರ್ಥಿಕ ಅಂಶಗಳನ್ನು ಪರಿಗಣಿಸದೆ ತೆಗೆದುಕೊಂಡ ನಿರ್ಧಾರ ಎಂದು ಹೋರಾಟಗಾರರು ಆರೋಪಿಸಿದ್ದಾರೆ.

ಅಭಿವೃದ್ಧಿ ಇಲ್ಲದೆ ಸೇರ್ಪಡೆ ಯಾಕೆ?

ಸಿರವಾರ ತಾಲುಕು ಘೋಷಣೆಯಾಗಿ ಹತ್ತು ವರ್ಷಗಳಾದರೂ ಮೂಲಭೂತ ಸೌಕರ್ಯಗಳು ಇನ್ನೂ ಸಮರ್ಪಕವಾಗಿ ಅಭಿವೃದ್ಧಿಯಾಗಿಲ್ಲ. ರಸ್ತೆಗಳು, ಕುಡಿಯುವ ನೀರು, ಆರೋಗ್ಯ ಕೇಂದ್ರಗಳು, ಉದ್ಯೋಗಾವಕಾಶಗಳು ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕುಂಠಿತವಾಗಿದೆ. ಈ ತಾಲುಕನ್ನು ಅವೈಜ್ಞಾನಿಕವಾಗಿ ಏಕಾಏಕಿ ದೂರದ 80 ಕಿ.ಮಿ ದೂರವಿರುವ ಸಿಂಧನೂರಿಗೆ ಸೇರ್ಪಡೆಗೊಳಿಸಿರುವದನ್ನು ಖಂಡಿಸಿ ತಾಲುಕಿನ ಹೋರಾಟಗಾರರು

''ಮೊದಲು ಸಿರವಾರವನ್ನು ಅಭಿವೃದ್ಧಿಪಡಿಸಿ, ಜಿಲ್ಲೆಗೆ ಸೇರ್ಪಡೆ ವಿಚಾರ ಇಲ್ಲಿಗೆ ಬಿಡಿ'' ಎಂದು ಸರ್ಕಾರಕ್ಕೆ ಎಚ್ಚರಿಕೆ ಸಂದೇಶ ನೀಡುವ ಮೂಲಕ ಸಿರವಾರ ತಾಲೂಕನ್ನು ರಾಯಚೂರು ಜಿಲ್ಲೆಯಲ್ಲಿ ಉಳಿಸಿಕೊಳ್ಳಲು ಬೃಹತ್ ಮೆರವಣಿಗೆಯ ಮುಖಾಂತರ ತಹಸೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಬಜೆಟ್‌ನಲ್ಲಿ ರೂ.200 ಕೋಟಿ ಮೀಸಲು ಆಗ್ರಹ

ಕೃಷಿಗೆ 2 ಎಕರೆ ಭೂಮಿ, ರೂ.2 ಲಕ್ಷ ಸಬ್ಸಿಡಿ, ಬಡ್ಡಿರಹಿತ ಸಾಲ, ಮೈತ್ರಿ ಪಿಂಚಣಿ ?2,000ಕ್ಕೆ, ವೃದ್ಧಾಪ್ಯ ಪಿಂಚಣಿ ರೂ.5,000ಕ್ಕೆ ಹೆಚ್ಚಳ, 1% ಮೀಸಲಾತಿಯ ಪರಿಣಾಮಕಾರಿ ಜಾರಿ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ,

ಉಚಿತ ಲಿಂಗತ್ವ ದೃಢೀಕರಣ ಶಸ್ತ್ರಚಿಕಿತ್ಸೆ, ಪುನರ್ವಸತಿ ನೆರವು, ಪ್ರತಿಜಿಲ್ಲೆಯಲ್ಲಿ ವಿಶೇಷ ಆರೋಗ್ಯ ಕೇಂದ್ರ, ''ಗೌರವಯುತ ಜೀವನ, ಉದ್ಯೋಗ ಹಾಗೂ ಆರೋಗ್ಯವು ಮೂಲಭೂತ ಹಕ್ಕುಗಳು. ಬಜೆಟ್‌ನಲ್ಲಿ ಘೋಷಣೆ ಆಗದಿದ್ದರೆ ರಾಜ್ಯದಾದ್ಯಂತ ಹೋರಾಟ ತೀವ್ರಗೊಳ್ಳಲಿದೆ,'' ಎಂದು ಚಳುವಳಿ ಎಚ್ಚರಿಸಿದೆ.

ಈ ಸಂದರ್ಭದಲ್ಲಿ ಎಂ.ಆರ್. ಭೇರಿ, ಅನಿಲ್ ಕುಮಾರ್, ಅಂಬಮ್ಮ, ವಿದ್ಯಾ ಪಾಟೀಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಿದ್ಯುತ್ ಖಾಸಗೀಕರಣ ರೈತರ ಪ್ರತಿಭಟನೆ

ಅಮೆರಿಕದ ಮಾಜಿ ಅಧ್ಯಕ್ಷ ಆಅಟಚಿಟಜ ಖಿಡಿಣಟಠಿ ಅವರ ಆಡಳಿತದ ನೀತಿಗಳ ಮುಂದುವರಿಕೆಯಾಗಿ ಈ ಕ್ರಮ ಬಂದಿದೆ ಎಂದು ಅವರು ಆರೋಪಿಸಿದರು. ಇದರಿಂದ ಭಾರತೀಯ ರಫ್ತುದಾರರಿಗೆ ತೀವ್ರ ಪರಿಣಾಮ ಉಂಟಾಗಬಹುದು ಎಂದು ಹೇಳಿ, ಕೇಂದ್ರ ಸರ್ಕಾರ ತಕ್ಷಣ ಸೂಕ್ತ ರಾಜತಾಂತ್ರಿಕ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆ ನಂತರ ಸಮಿತಿ ಪದಾಧಿಕಾರಿಗಳು ಸಂಬಂಧಿತ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಸಂಗಮೇಶ್ ನಾಯಕ್ (ಜಿಲ್ಲಾಧ್ಯಕ್ಷರು), ಬಸವರಾಜ್ ಗೌಡ ರಾಮನೂರು (ರಾಜ್ಯ ಗೌರವಾಧ್ಯಕ್ಷರು), ಅಕ್ಕಮಹಾದೇವಿ ಪಾಟಿಲ್ (ಮಹಿಳಾ ಘಟಕ ರಾಜ್ಯಾಧ್ಯಕ್ಷರು), ಅಲಂಘನಿ, ಆಂಜನೇಯ ಶಾಸ್ತ್ರಿ, ಸಾಬಣ್ಣ ನಾಯಕ್, ಸತ್ಯರಡ್ಡಿ ಗೌಡ ರಾಂಪುರ್, ವಿರುಪಾಕ್ಷಿ ನಾಯಕ್ ಸೇರಿದಂತೆ ಹಲವಾರು ರೈತರು ಮತ್ತು ಮಹಿಳೆಯರು ಭಾಗವಹಿಸಿದ್ದರು.

ಸಹಕಾರಿ ಸಂಘದಲ್ಲಿ ನಡೆದಿರುವ ಭ್ರಷ್ಟಾಚಾರ ಹಾಗೂ ನಿಯಮಬಾಹಿರ ನೇಮಕಾತಿ ತನಿಖೆಗೆ ಆಗ್ರಹಿಸಿ ಮಂಗಳವಾರ ಇಲಾಖೆ ಎದುರು ಪ್ರತಿಭಟನೆ

ಜಿಲ್ಲಾ ಮಟ್ಟದ ಕೆಲವು ಅಧಿಕಾರಿಗಳು ದಿನಕ್ಕೊಂದು ತೀರ್ಮಾನ ಕೈಗೊಂಡು ಸಹಕಾರಿ ಸಂಘವನ್ನು ಖಾಸಗಿ ಆಸ್ತಿಯಂತೆ ಬಳಸಿಕೊಳ್ಳುತ್ತಿರುವುದು ಕಾನೂನು ಮತ್ತು ಆಡಳಿತ ವ್ಯವಸ್ಥೆಯ ಅವಮಾನವಾಗಿದೆ. ಇದು ತಕ್ಷಣ ನಿಲ್ಲದಿದ್ದರೆ ರೈತ ಸಮುದಾಯದಲ್ಲಿ ತೀವ್ರ ಅಶಾಂತಿ ಉಂಟಾಗುವ ಸಾಧ್ಯತೆ ಇದೆ. ಆದ ಕಾರಣ ಭ್ರಷ್ಟಾಚಾರದಲ್ಲಿ ಭಾಗಿಯಾದ ಮತ್ತು ಸಹಕಾರಿ ಸಂಘಗಳ ನಿಯಮಗಳನ್ನ ಉಲ್ಲಂಘಿಸಿದ ತಪಿತಸ್ಥ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೇಲೆ ಸೂಕ್ತ ಕಾನೂನು ಕ್ರಮಕ್ಕಾಗಿ ಒತ್ತಾಯಿಸಿ, ಜಾಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಮುಂದೆ ದಿನಾಂಕ 24/02/2026 ಮಂಗಳವಾರ ರಂದು ಕರ್ನಾಟಕ ಪ್ರಾಂತ ರೈತ ಸಂಘ ಜಾಲಹಳ್ಳಿ ಗ್ರಾಮ ಸಮಿತಿಯಿಂದ ಪ್ರತಿಭಟನೆ ಮಾಡಲಾಗುತ್ತದೆ ಎಂದು ಹೇಳಿದರು,

ಇದೆ ಸಂದರ್ಭದಲ್ಲಿ ಕಾರ್ಯದರ್ಶಿ ರಂಗನಾಥ್ ಬುಂಕಲದೊಡ್ಡಿ, ದುರ್ಗಪ್ಪ ವರಟಿ, ಹನುಮಂತ ಗಣೆಕಲ್, ಬಸವರಾಜ ವಂದಲಿ, ಖಲಿಂ ಉದ್ದಾರ, ಮತ್ತು ಇತರರು ಇದ್ದರು,

ಬಾಲಕೇಂದ್ರ ವಾರ್ಷಿಕೋತ್ಸವ ಕಾರ್ಯಕ್ರಮ

ಜನಪದದ ಸಂಯೋಜಕರಾದ ಗಾರಾ ಶಾಮ ಸುಂದರ್ , ಪತ್ರಾಚಾರ ದ್ವಾರ ಶಿಕ್ಷಣ ಪ್ರಮುಖರಾದ ಮನೋಹರ್ ಬಡಿಗೇರ್ ಮತ್ತು ಇನ್ನಿತರ ಕಾರ್ಯಕರ್ತರು ಕಾರ್ಯಕ್ರಮವನ್ನು ನೆರವೇರಿಸಿದರು. ಎಲ್ಲಾ ಮಕ್ಕಳ ಪಾಲಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಶಾರದಾ ವಿದ್ಯಾನಿಕೇತನ ಶಾಲೆಯ ಆಡಳಿತ ಮಂಡಳಿಗೆ ಧನ್ಯವಾದ ಅರ್ಪಿಸುವ ಮೂಲಕ ಕಾರ್ಯಕ್ರಮವನ್ನು ಮುಗಿಸಲಾಯಿತು.

ಅಪ್ಪ ಕೆರೆಯಲ್ಲಿ ಫಲಪುಷ್ಪ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಚಾಲನೆ:

ಹೂವುಗಳಲ್ಲಿ ಅಲಂಕೃತ ಸಂವಿಧಾನ ಪ್ರತಿಕೃತಿ ಪ್ರಮುಖ ಆಕರ್ಷಣೆ



ಕಲಬುರಗಿ,ಫೆ.23-

ನಗರದ ಶ್ರೀ ಶರಣಬಸವೇಶ್ವರರ ಕೆರೆ ಉದ್ಯಾನವನ ಆವರಣದಲ್ಲಿ ರವಿವಾರ ಎರಡು ದಿನಗಳ ಫಲಪುಷ್ಪ ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಚಾಲನೆ ನೀಡಲಾಗಿದ್ದು, ಸುಮಾರು 1.50 ಲಕ್ಷ ಹೂವುಗಳಿಂದ ಅಲಂಕರಿಸಿದ ಭಾರತದ ಸಂವಿಧಾನ ಪ್ರತಿಕೃತಿ ಪ್ರಮುಖ ಅಕರ್ಷಣೀಯವಾಗಿ ಕಂಡುಬಂತು.

ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶ್ರೀ ಶರಣಬಸವೇಶ್ವರ ಕೆರೆ ಅಭಿವೃದ್ಧಿ ಪ್ರಾಧಿಕಾರ ಹಾಗೂ ತೋಟಗಾರಿಕೆ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಫಲಪುಷ್ಪ ಪ್ರದರ್ಶನ ಹಾಗೂ ಮಾರಾಟ ಮೇಳದಲ್ಲಿ ಜೈ ಶ್ರೀಕೃಷ್ಣ ಇವೆಂಟ್ಸ್ ಹೂ ನಿರ್ಮಾಣ ವಿನ್ಯಾಸಕ ಕೆ.ಜಗದೀಶ ಅವರ ಕಲಾಕೃತಿಯಲ್ಲಿ ಮೂಡಿಬಂದಿರುವ ಭಾರತೀಯ ಸಂವಿಧಾನ ಪ್ರತಿಕೃತಿ ಅಲಂಕಾರಕ್ಕೆ ವಿವಿಧ ತಳಿಯ ಚೆಂಡು, ಸೇವಂತಿಗೆ, ಚೈನಾ ಆಸ್ಟರ್, ಆಸ್ಪರಾಗಸ್ ಹಾಗೂ ವಿವಿಧ ಅಲಕಂಕಾರಿಕ ಸುಮಾರು 1.50 ಲಕ್ಷ ಹೂವುಗಳಿಂದ ಬಳಸಿದ್ದು, ಇದು ವೀಕ್ಷಕರ ಗಮನ ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಭಾರತ ಸಂವಿಧಾನ ಪ್ರತಿಕೃತಿಯ ಕಲಾಕೃತಿ ಸುಂದರವಾಗಿ ಕಾಣಲು ಸುತ್ತಲು ವಿವಿಧ ತರಕಾರಿಗಳಾದ ಕಲ್ಲಂಗಡಿ, ಬದನೆಕಾಯಿ, ಸೋರೆಕಾಯಿ, ಗಜರಿ, ಸವತೆಕಾಯಿ, ಕ್ಯಾಪ್ಸಿಕಂ ಹಾಗೂ ಇತರೆ ತರಕಾರಿಗಳನ್ನು ಬಳಸಲಾಗಿದೆ. ಇದಲ್ಲದೆ ತರಕಾರಿಯಲಿ ಕೆತ್ತನೆ ಮಾಡಿ ಕಲಬುರಗಿಯ ಪ್ರಮುಖ ಪ್ರವಾಸಿ ಕೇಂದ್ರಗಳಾದ ಶ್ರೀ ಶರಣಬಸವೇಶ್ವರ ದೇವಸ್ಥಾನ, ಖಾಜಾ ಬಂದೇನವಾಜ್ ದರ್ಗಾ, ಕಲಬುರಗಿ ಕೋಟೆ, ಬುದ್ಧ ವಿಹಾರ ಮೂಡಿಬಂದಿರುವುದು ಸಹ ಸ್ಥಳೀಯರಿಗೆ ಇದು ಮತ್ತಷ್ಟು ಹತ್ತಿರವಾಗಿ ಕಾಣಲಿದೆ. ತೋಟಗಾರಿಕೆ ಇಲಾಖೆಯ ಮಹಿಳಾ ಸಿಬ್ಬಂದಿಯವರು ವಿಶೇಷವಾಗಿ ಸಿದ್ದಪಡಿಸಲಾದ ತರಕಾರಿ ರಂಗೋಲಿ ಮತ್ತು ಸೆಲ್ಫಿ ಪಾಯಿಂಟ್ ಕೂಡಾ ಪ್ರಮುಖ ಆಕರ್ಷಣೆಗಳಲ್ಲೊಂದಾಗಿದೆ. ಮಹಿಳಾ ಸಿಬ್ಬಂದಿಯ ಪರಿಶ್ರಮ ಕಂಡ ಪ್ರಾದೇಶಿಕ ಆಯುತೆ ಜಹೀರಾ ನಸೀಮ್ ಮತ್ತು ಡಿ.ಸಿ. ಬಿ.ಫೌಜಿಯಾ ತರನ್ನುಮ್ ಅವರುಯ ಮುಕ್ತ ಮನಸ್ಸಿನಿಂದ ಪ್ರಶಂಸಿದರು.

ಇನ್ನು ಕಲಬುರಗಿ ಜಿಲ್ಲೆಯ ಎಲ್ಲಾ ತಾಲ್ಲೂಕಿನಿಂದ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ಸೌಲಭ್ಯಗಳನ್ನು ಪಡೆದ ರೈತರು ಬೆಳೆದ ವಿವಿಧ ತಳಿಯ ಹಣ್ಣು, ತರಕಾರಿ, ಹೂವು ಬೆಳೆಗಳ ಉತ್ಪನ್ನಗಳನ್ನು ಮಳಿಗೆಯಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ವಿಶೇಷವಾಗಿ ಅಫಜಲಪೂರ ತಾಲ್ಲೂಕಿನ ಲಚ್ಚಪ್ಪಾ ಜಮಾದಾರ್ ಅವರು ಕ್ಯಾಲಿಫೋರ್ನಿಯಾ ಕ್ವೀನ್ ಬೆರ್ರಿ, ಚಿಂಚೋಳಿ ತಾಲ್ಲೂಕಿನ ಪುದಿನಾ ಮತ್ತು ಪೈನಾಪಲ್, ಕಲಬುರಗಿ ತಾಲ್ಲೂಕಿನ ಅಣಬೆ ಮತ್ತು ತಾಳೆಬೆಳೆ, ಆಳಂದ ತಾಲ್ಲೂಕಿನ ಬಾಳೆ ಪಪ್ಪಾಯ ಇತರೆ ಅನೇಕ ಬೆಳೆಗಳು ಒಳಗೊಂಡಂತೆ 500 ಕ್ಕೂ ಹೆಚ್ಚು ಪ್ರದರ್ಶಿಕೆಗಳನ್ನು ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿದೆ.

ಕಲ್ಲಂಗಡಿಯಲ್ಲಿ ಅರಳಿದ ನಾಯಕರು: ಕಲ್ಲಂಗಡಿಯಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ದ.ರಾ. ಬೇಂದ್ರೆ, ಸ್ವಾತಂತ್ರ್ಯ ಹೋರಾಟಗಾರರಾದ ಭಗತಸಿಂಗ್, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಚಂದ್ರಶೇಖರ ಆಝಾದ್, ಸಂಗೊಳ್ಳಿ ರಾಯಣ್ಣ, ಸುಭಾಷ ಚಂದ್ರಭೋಸ್, ಲಾಲ್ ಬಹದ್ದೂರ್ ಶಾಸ್ತ್ರಿ, ಕಿತ್ತೂರ ರಾಣಿ ಚೆನ್ನಮ್ಮ ಹೀಗೆ ಅನೇಕರ ಕಲಾಕೃತಿಗಳು ನೋಡುಗರಿಗೆ ಸಂತೋಷ ಉಂಟು ಮಾಡಲಿವೆ. ಇದಲ್ಲದೆ ಹುಬ್ಬಳ್ಳಿಯ ಇಸ್ಮಾಯಿಲ್ ಅವರ ಕಲಾ ಕುಂಚದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಮೂಡಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಇನ್ನು ಜಿಲ್ಲೆಯ ರೈತರಿಂದ ನೇರವಾಗಿ ಗ್ರಾಹಕರಿಗೆ ನೇರವಾಗಿ ಹಣ್ಣು ಮತ್ತು ತರಕಾರಿ ಹಾಗೂ ಸಂಸ್ಕರಣಾ ಉತ್ಪನ್ನಗಳು ಮಾರಾಟಕ್ಕಾಗಿ ಇಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ. ಅಫಜಲಪೂರ ದ್ರಾಕ್ಷಿ ಬೆಳೆಗಾರರಾದ ಜಯಪ್ಪ ಎಮ್. ಕೊರಬು, ರೇವಣಸಿದ್ದಪ್ಪ ಹಾಳಕಿ, ಅರವಿಂದ ಹಾಳಕಿ ಅವರು ದ್ರಾಕ್ಷಿ ಮತ್ತು ಸಾವಯವ ಉತ್ಪನ್ನಗಳು, ಬಾಪುಗೌಡ ಬಿರಾದಾರ ಗುಡ್ಡೆವಾಡಿ ಅವರರು ಬಾಳೆಯಿಂದ ತಯಾರಿಸಿದ ಚಿಪ್ಸ್, ಹಣಮಂತಪ್ಪ ಬೆಳಗುಂಪಿ ಅವರು ಸಾವಯವ ತೋಟಗಾರಿಕೆ ಉತ್ಪನ್ನಗಳು, ಲಕ್ಷ್ಮೀಕಾಂತ ಹಿಬಾರೆ ರವರ ಸಾವಯವ ಅರಶೀಣ ಮತ್ತು ಇತರೆ ಉತ್ಪನ್ನಗಳು ಮಾರಾಟಕ್ಕೆ ಅವಕಾಶ ಕಲ್ಪಿಸಿದೆ. ರದ್ದೇವಾಡಿ ಕೃಷಿ ವಿಜ್ಞಾನ ಕೇಂದ್ರದಿಂದ ತಾರಸಿ ಮತ್ತು ಕೈ ತೋಟದ ಬೀಜಗಳ ಕಿಟ್‌ಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

ಫಲಪುಷ್ಪ ಮತ್ತು ಮಾರಾಟ ಮೇಳಕ್ಕೆ ಚಾಲನೆ ನೀಡಿದ ವಿಧಾನ ಪರಿಷತ್ ಶಾಸಕ ಜಗದೇವ ಗುತ್ತೇದಾರ ಮಾತನಾಡಿ, ತೋಟಗಾರಿಕೆಯ ಇಲಾಖೆ ತುಂಬಾ ಪರಿಶ್ರಮ ಹಾಕಿ ಒಳ್ಳೆಯ ಫಲಪುಷ್ಪ ಪ್ರದರ್ಶನ ಏರ್ಪಡಿಸಿದೆ. ಇದು ರೈತಾಪಿ ವರ್ಗದವರಿಗೆ ತುಂಬಾ ಅನುಕೂಲವಾಗಿದೆ. ತರಕಾರಿ, ಹಣ್ಣು ಬೆಳೆಯಲು ಹೊಸ ತಳಿ, ಪ್ರಯೋಗ ಕುರಿತು ಅವರಿಗೆ ಜಾಗೃತಿ ಮೂಡಿಸಲು ಸ್ಟಾಲ್ ಸಹ ಹಾಕಿದ್ದಾರೆ. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಇದರ ಲಾಭ ಪಡೆಯಬೇಕು. ಬೆಂಗಳೂರು, ಮೈಸೂರಿನಲ್ಲಿ ಇಂತಹ ಪ್ರದರ್ಶನ ಕಾಣಲು ಸಿಗುತ್ತಿತು. ಇದೀಗ ಕಲಬುರಗಿಯಲ್ಲಿಯೆ ಪ್ರದರ್ಶಕ್ಕೆ ವ್ಯವಸ್ಥೆ ಮಾಡಿದ್ದು ಒಳ್ಳೆಯದು ಎಂದರು. ಸಾರ್ವಜನಿಕರು, ಮಕ್ಕಳು ವೀಕ್ಷಿಸುವಂತೆ ಡಿ.ಸಿ., ಆರ್.ಸಿ. ಮನವಿ: ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್ ಮಾತನಾಡಿ, ಎರಡು ದಿನ ಫಲಪುಷ್ಪ ಪ್ರದರ್ಶನ ಸರ್ವರಿಗೂ ಉಚಿತವಾಗಿದೆ. ವಿಶೇಷವಾಗಿ ನಗರದ ನಿವಾಸಿಗಳು ಶಾಲಾ ಮಕ್ಕಳು ಭೇಟಿ ನೀಡಿ ತರಕಾರಿ-ಹಣ್ಣುಗಳಲ್ಲಿ ಮೂಡಿಬಂದ ಕಲಾಕೃತಿಗಳನ್ನು ಕಣ್ತುಂಬಿಕೊಳ್ಳಬಹುದು ಎಂದರು.

ಡಿ.ಸಿ. ಬಿ.ಫೌಜಿಯಾ ತರನ್ನುಮ್ ಮಾತನಾಡಿ, ಮೂರು ವರ್ಷಗಳ ನಂತರ ಸಂವಿಧಾನ ವಿಷಯಾಧಾರಿತ ಕೇಂದ್ರಿತವಾಗಿ ಎರಡು ದಿನಗಳ ಕಾಲ ಫಲ-ಪುಷ್ಪ ಪ್ರದರ್ಶನ ಏರ್ಪಡಿಸಲಾಗಿದೆ. ಸ್ವಾತಂತ್ರ್ಯ ಹೋರಾಟಗಾರರು, ಪ್ರವಾಸಿ ತಾಣಗಳು, ಧಾರ್ಮಿಕ ಕ್ಷೇತ್ರಗಳು ಎಲ್ಲವು ಕಲಾವಿದನ ಕೆತ್ತನೆಯಲ್ಲಿ ಮೂಡಿಬಂದಿವೆ. ಅದ್ಭುತ ಪ್ರದರ್ಶನ ಇದಾಗಿದೆ. ಶಾಲಾ ಮಕ್ಕಳು, ಯುವಕರು ಬಂದು ನೋಡಬೇಕು ಎಂದರು.

ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಜಿಲ್ಲಾ ಕೃಷಿ ಸಮಾಜದ ಅಧ್ಯಕ್ಷ ಸಿದ್ರಾಮಪ್ಪಾ ಪಾಟೀಲ ಧಂಗಾಪೂರ್, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಮಲ್ಲಿಕಾರ್ಜುನ ಭೂಶಟ್ಟಿ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಸಂತೋಷ ಇನಾಮದಾರ್, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಗಳಾದ ಬಾಬುರಾವ ಪಾಟೀಲ, ಸುರೇಂದ್ರನಾಥ, ಶಂಕರಗೌಡ, ಸಂತೋಷ ತಾಂಡೂರ, ರಾಜಕುಮಾರ, ಎಂ.ಡಿ ಸಮಿಯೊದ್ದಿನ್, ಅಜಿಮೊದ್ದಿನ್, ಶಂಕರ ಪಟವಾರಿ, ವೆಂಕಟ ಸಜ್ಜನ ಸೇರಿದಂತೆ ತೋಟಗಾರಿಕೆ ಇಲಾಖೆಯ ಇನ್ನಿತರ ಅಧಿಕಾರಿ-ಸಿಬ್ಬಂದಿಗಳು ಹಾಜರಿದ್ದರು.

ಕಷ್ಟಗಳನ್ನು ಜಯಿಸಿ ಐಪಿಎಸ್ ಆಗಿದ್ದೇನೆ: ಪೊಲೀಸ್ ಆಯುಕ್ತ ಡಾ.ಶರಣಪ್ಪ ಢಗೆ



ಕಲಬುರಗಿ, ಫೆ.23-

ನವೋದಯ ಪ್ರವೇಶ ಪರೀಕ್ಷೆಗೆ ಮೂವತ್ತು ರೂಪಾಯಿ ಶುಲ್ಕ ಕಟ್ಟಲು ಸಹ ತಡಕಾಡಿದ್ದ ದಿನಗಳಿಂದ ಪೊಲೀಸ್ ಕಮಿಷನರ್ ಹುದ್ದೆವರೆಗೆ ತಲುಪಲು ಬಹಳಷ್ಟು ಶ್ರಮವಹಿಸಿದ್ದೇನೆ ಎಂದು ನಗರ ಪೊಲೀಸ್ ಆಯುಕ್ತರಾದ ಡಾ.ಶರಣಪ್ಪ ಢಗೆ ಹೇಳಿದರು.

ತಾಲೂಕಿನ ಹಾಗರಗುಂಡಗಿ ಸರ್ಕಾರಿ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು, ಪ್ರಾಮಾಣಿಕತೆ ಮತ್ತು ಸಮಯಪಾಲನೆ ಅಳವಡಿಸಿಕೊಂಡರೆ ಉತ್ತಮ ನಾಗರಿಕರಾಗಬಹುದು ಎಂದರು. ಉನ್ನತ ಹುದ್ದೆಗೇರಲು ಬಾಲ್ಯದಲ್ಲಿ ಅನೇಕ ಕಷ್ಟಗಳನ್ನು ಎದುರಿಸಿದ್ದೇನೆ.

ಒಂದು ರೂಪಾಯಿ ಸಹ ಮನೆಯಿಂದ ಪಡೆಯದೇ ಸ್ಕಾಲರ್‌ಶಿಪ್ ಹಣದಿಂದಲೇ ಐಪಿಎಸ್ ಆಗಿದ್ದೇನೆ ಎಂದು ಸ್ಮರಿಸಿದರು.

ಸೋಲು-ಗೆಲುವು ಜೀವನದ ಭಾಗಗಳು. ಆದರೆ ನಿರಂತರ ಪ್ರಯತ್ನ ಹಾಗೂ ಆತ್ಮವಿಶ್ವಾಸವೇ ನಿಜವಾದ ಯಶಸ್ಸಿನ ಮಂತ್ರ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ನಿರ್ದಿಷ್ಟ ಗುರಿ ಹೊಂದಿ, ಅದನ್ನು ಸಾಧಿಸಲು ಶ್ರಮಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರು ಮತ್ತು ಡೀನ್ ಪ್ರೊ. ಎಚ್.ಟಿ. ಪೋತೆ ವಿಶೇಷ ಉಪನ್ಯಾಸ ನೀಡಿ, ಮಕ್ಕಳು ಜೀವನದಲ್ಲಿ ಒಳ್ಳೆಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಗೌತಮ ಬುದ್ಧ, ಬಸವಣ್ಣ ಮತ್ತು ಬಿ.ಆರ್.ಅಂಬೇಡ್ಕರ್ ಅವರ ಜೀವನ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ತಮ್ಮೂ ಬಡತನದಲ್ಲಿ ಬೆಳೆದು ಸಾಧನೆಗೈದಿರುವುದನ್ನು ಉದಾಹರಣೆಯಾಗಿ ವಿವರಿಸಿದರು.

ವೇದಿಕೆ ಮೇಲೆ ಹಾಗರಗುಂಡಗಿಯ ವಿರಕ್ತ ಮಠದ ಶ್ರೀ ಮ.ನಿ.ಪ್ರ.ಪೂಜ್ಯ ಶಿವಾನಂದ ಮಹಾಸ್ವಾಮಿಜಿಗಳು ದಿವ್ಯ ಸಾನಿಧ್ಯ ವಹಿಸಿದರು. ಮಿಣಜಿಗಿಯ ಬೂದಿಬಸವೇಶ್ವರ ಸಂಸ್ಥಾನಮಠದ ಶ್ರೀ ಷ.ಬ್ರ. ಚಿದಾನಂದ ಮಹಾಸ್ವಾಮೀಜಿಗಳು, ಶಿಕ್ಷಣ ಪ್ರೇಮಿ ಬಳಗದ ಮುಖಂಡರಾದ ಗುರುಬಸಯ್ಯ ಹಿರೇಮಠ, ಅರವಿಂದ ಹುಣಚಿಕೇರಿ, ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯಗುರುಗಳಾದ ಶ್ರೀಮತಿ ಗಾಳಮ್ಮ, ಉಭಯ ಶಾಲೆಯ ಎಸ್‌ಡಿಎಮ್‌ಸಿ ಸದಸ್ಯರಾದ ಮಲ್ಲಿಕಾರ್ಜುನ ಖನ್ನಾ, ಬಸವರಾಜ ವಜಾಪೂರ ಹಾಗೂ ಗ್ರಾಮದ ಮುಖಂಡ ಸೋಮಶೇಖರ ಸಜ್ಜನ್ ಉಪಸ್ಥಿತರಿದ್ದರು.

ಶಿವಶರಣಪ್ಪ ಕುರನಳ್ಳಿ ಸ್ವಾಗತಿಸಿದರು. ಡಾ.ಬಾಬುರಾವ ಬಿದನೂರ ಪ್ರಾಸ್ತಾವಿಕ ಮಾತನಾಡಿದರೆ, ಸಿದ್ದು ಪಾಟೀಲ ಅತಿಥಿ ಪರಿಚಯಿಸಿದರು. ರಘುನಾಥ್ ಮೊಸರಬೋ ನಿರೂಪಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಮಲ್ಲಿಕಾರ್ಜುನ ಸೇಡಮ್ ವಂದಿಸಿದರು. ಗ್ರಾಮದ ಶಿಕ್ಷಣ ಪ್ರೇಮಿ ಬಳಗದ ಸದಸ್ಯರು, ಶಾಲಾ ಶಿಬ್ಬಂದಿ ವರ್ಗದವರು, ಮಕ್ಕಳು ಉಪಸ್ಥಿತಿ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.



ಕಲಿಕಾ ಸಾಮರ್ಥ್ಯದೊಂದಿಗೆ ಸಾಧನೆಗೆ ಪ್ರೋತ್ಸಾಹಿಸಿ: ಪ್ರೊ. ರಮೇಶ್ ಲಂಡನಕರ್

ಕಲಬುರಗಿ,ಫೆ.23-

ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯದ ಜೊತೆಗೆ ಗುರಿ ಸಾಧನೆಗೆ ಪ್ರೋತ್ಸಾಹ ನೀಡುವುದು ಶಿಕ್ಷಕರ ಕರ್ತವ್ಯ. ಪಾಠದ ಜೊತೆಗೆ ಓದುವ ಆಸಕ್ತಿ ಮತ್ತು ಆತ್ಮವಿಶ್ವಾಸ ಬೆಳೆಸಬೇಕು ಎಂದು ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ರಮೇಶ ಲಂಡನಕರ್ ಹೇಳಿದರು.

ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಪೂರ್ವ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಮಹಾತ್ಮ ಗಾಂಧಿ ಸಭಾಂಗಣದಲ್ಲಿ ಆಯೋಜಿಸಿದ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಪೋಷಕರು ಮನೆಯಲ್ಲಿ ಮಕ್ಕಳ ಕಲಿಕೆ ಮತ್ತು ಅಭ್ಯಾಸದ ಕಡೆಗೆ ಗಮನಹರಿಸಬೇಕು. ಓದಿನಲ್ಲಿ ಆಸಕ್ತಿ, ಕಲಿಕೆಯಲ್ಲಿ ಏಕಾಗ್ರತೆ, ಪರೀಕ್ಷಾ ಸಿದ್ದತೆ ಕುರಿತು ಮಾರ್ಗದರ್ಶನ ಮಾಡಬೇಕು. ಉತ್ತಮ ಆಲೋಚನೆ ಮೂಲಕ ಶಿಕ್ಷಣದ ಮಹತ್ವವನ್ನು ತಿಳಿಸಬೇಕು ಎಂದರು.

ಸಿಂಡಿಕೇಟ್ ಸದಸ್ಯ ಎಸ್.ಪಿ.ಸುಳ್ಳದ ಮಾತನಾಡಿ, ಮಕ್ಕಳು ಕಲಿಕೆ ಸಾಧನೆಯಲ್ಲಿ ಶಿಕ್ಷಕರು ಕಾಳಜಿ ತೋರಿಸಬೇಕು. ಬಡ ಮಕ್ಕಳು ಸರ್ಕಾರಿ ಶಾಲೆಗಳನ್ನೇ ಅವಲಂಬಿಸಿದ್ದಾರೆ. ಅವರ ಉಜ್ವಲ ಭವಿಷ್ಯ ಶಿಕ್ಷಕರ ಕೈಲಿದೆ. ಅಗತ್ಯವಿರುವ ಸೌಲಭ್ಯಗಳನ್ನು ನೀಡುವ ಮೂಲಕ ಶಿಕ್ಷಕರು ಪ್ರೋತ್ಸಾಹ ನೀಡುವ ಮೂಲಕ ಶಾಲಾ ಅಭಿವೃದ್ಧಿ ಕಡೆಗೂ ಆಸಕ್ತಿ ವಹಿಸಬೇಕು ಎಂದರು.

ಪ್ರಾಥಮಿಕ ಶಾಲೆಯ ಮುಖ್ಯೋಪಧ್ಯಾಯರಾದ ಪಿ.ಚಂದ್ರಕಲಾ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರೌಢಶಾಲೆ ಮುಖ್ಯೋಪಧ್ಯಾಯ ಸೂರ್ಯಕಾಂತ ಅಮರೆ ಅತಿಥಿ ಗಣ್ಯರನ್ನು ಸ್ವಾಗತಿಸಿ ವಾರ್ಷಿಕ ವರದಿ ಮಂಡಿಸಿದರು. ಹಣಕಾಸು ಅಧಿಕಾರಿ ಜಯಾಂಬಿಕಾ, ಶಾಲಾ ಸುಧಾರಣಾ ಸಮಿತಿ ಸದಸ್ಯರಾದ ಪ್ರೊ. ದೇವಿದಾಸ ಮಾಲೆ ಬಿ.ಎಂ. ರುದ್ರವಾಡಿ, ಪ್ರಾಥಮಿಕ ಮತ್ತು ಪ್ರೌಢ ಶಾಲೆ ಮೇಲುಸ್ತುವಾರಿಗಳಾದ ಡಾ. ಚಂದ್ರಕಾತತ ಬಿರಾದಾರ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಿಂಡಿಕೇಟ ಸದಸ್ಯರು, ವಿದ್ಯಾವಿಷಯಕ ಪರಿಷತ್ ಸದಸ್ಯರು, ಶಾಲಾ ಸುಧಾರಣಾ ಸಮಿತಿಯ ಸದಸ್ಯರು, ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ, ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಪಾಲಕರು, ಪೋಷಕರು, ವಿಶ್ವವಿದ್ಯಾಲಯದ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳು ಹಾಗೂ ನಾಗರಿಕರು ಭಾಗವಹಿಸಿದ್ದರು. ಶಿವಕುಮಾರ್ ಸಾವಳಗಿ ಹಾಗೂ ಜಗದೇವಿ ಬಿರಾದಾರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು. ಅಮೃತಾ ಪ್ರಾರ್ಥಿಸಿದರು. ಶಿಕ್ಷಕ ಸೂರ್ಯಕಾಂತ್ ಹದಗಲ್ ಕಾರ್ಯಕ್ರಮ ನಿರ್ವಹಿಸಿ ವಂದಿಸಿದರು.

ಸರಕಾರಿ ಆಸ್ಪತ್ರೆಯಲ್ಲಿ ಕಳ್ಳತನ : ಕ್ರಮಕ್ಕೆ ಡಿಎಸ್‌ಎಸ್ ಆಗ್ರಹ

ಲಿಂಗಸುಗೂರು,ಫೆ.22-

ಕರ್ನಾಟಕ ದಲಿತ ಸಂಘರ್ಷ ಸಮಿತಿ (ದಾದಾ ಸಾಹೇಬ ಡಾ ಎನ್. ಮೂರ್ತಿ ಸ್ಥಾಪಿತ) ತಾಲೂಕು ಸಮಿತಿ ಲಿಂಗಸಗೂರು ವತಿಯಿಂದ ಸರಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಕಠಿಣ ಕ್ರಮ ಕೈಗೊಳ್ಳುವಂತೆ ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.

ದಿನಾಂಕ 17-02-2026ರಂದು ರಾತ್ರಿ ಸುಮಾರು 12.00 ಗಂಟೆಯ ವೇಳೆಗೆ ಲಿಂಗಸಗೂರು ಸರಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಳ್ಳತನ ನಡೆದಿದ್ದು, ಘಟನೆ ಸಿ.ಸಿ.ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಚಿಕ್ಕಯರದಿಹಾಳ ಗ್ರಾಮದ ಕಿಡಿಯಪ್ಪ ತಂ: ಹಿರಗಪ್ಪ ಅವರು ಅನಾರೋಗ್ಯದ ಹಿನ್ನೆಲೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ದಾಖಲಾಗಿದ್ದರು. ಅವರು ಮಲಗಿದ್ದ ಸಂದರ್ಭದಲ್ಲಿ ಅಂಗಿಯನ್ನು ಬಿಚ್ಚಿ ತಲೆದಿಂಬಿನ ಬಳಿ ಇಟ್ಟಿದ್ದು, ನಿದ್ರೆಯಲ್ಲಿದ್ದ ಸಮಯದಲ್ಲಿ ಕಳ್ಳನು ವಾರ್ಡ್‌ನಲ್ಲಿ ಸುತ್ತಾಡಿ ಅವರ ಜೇಬಿನಿಂದ ಸುಮಾರು ₹8,500 ಹಣ ಕಳವು ಮಾಡಿಕೊಂಡಿರುವುದು ಸಿ.ಸಿ.ಕ್ಯಾಮೆರಾ ದೃಶ್ಯಗಳಿಂದ ಬೆಳಕಿಗೆ ಬಂದಿದೆ ಎಂದು ತಿಳಿದುಬಂದಿದೆ.


ಈ ಕುರಿತು ಬುಧವಾರ ಬೆಳಿಗ್ಗೆ ಸುಮಾರು 11.00 ಗಂಟೆಗೆ ಲಿಂಗಸಗೂರು ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗಿದೆ.ಆದರೆ ಯಾವು ದೇ ದೃಢವಾದ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಸಮಿತಿ ಆರೋಪಿಸಿದೆ.

ಇದೇ ಅವಧಿಯಲ್ಲಿ ಲಿಂಗಸಗೂರು ಪಟ್ಟಣದಲ್ಲಿ ಇನ್ನೂ 23 ಕಡೆ ಕಳ್ಳತನ ಪ್ರಕರಣಗಳು ನಡೆದಿರುವುದು ತಿಳಿದುಬಂದಿದೆ. ಕುಪ್ಪಿಗುಡ್ಡ ಗ್ರಾಮದ ಮಹಿಳೆಯೊಬ್ಬರ ಸುಮಾರು 1500 ಗ್ರಾಂ ಚಿನ್ನಾಭರಣಗಳನ್ನು ಕಳ್ಳರು ವಂಚನೆ ಮೂಲಕ ಕಳವು ಮಾಡಿಕೊಂಡಿರುವ ಘಟನೆ ಕೂಡ ವರದಿಯಾಗಿದೆ. ಅಲ್ಲದೆ ಪಟ್ಟಣದ ಇತರ ಭಾಗಗಳಲ್ಲಿಯೂ ಮಹಿಳೆಯರ ಬಂಗಾರದ ಬಳೆಗಳನ್ನು ಕಿತ್ತು ಪರಾರಿಯಾಗಿರುವ ಪ್ರಕರಣಗಳು ಬೆಳಕಿಗೆ ಬಂದಿವೆ.

ಪಟ್ಟಣದಲ್ಲಿ ನಿರಂತರವಾಗಿ ನಡೆಯುತ್ತಿರುವ ಕಳ್ಳತನ ಪ್ರಕರಣಗಳಿಂದ ಸಾರ್ವಜನಿಕರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ.ಆದ್ದರಿಂದ ಪೊಲೀಸ್ ಇಲಾಖೆ ಕಳ್ಳತನಕ್ಕೆ ಕಡಿವಾಣ ಹಾಕಿ, ಕಳ್ಳತನ ಜಾಲವನ್ನು ಬೇಧಿಸಿ ಆರೋಪಿಗಳನ್ನು ಶೀಘ್ರವೇ ಬಂಧಿಸುವಂತೆ ಹಾಗೂ ಸರಕಾರಿ ಆಸ್ಪತ್ರೆಯಲ್ಲಿ ರಾತ್ರಿ ಪಾಳಿಯಲ್ಲಿ ಕಾವಲುಗಾರರನ್ನು ನೇಮಿಸುವಂತೆ ಸಂಬಂಧಪಟ್ಟ ಇಲಾಖೆಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲೂಕು ಸಮಿತಿಯ ಪದಾಧಿಕಾರಿಗಳು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾ ಉಪಾಧ್ಯಕ್ಷ ದುರಗಪ್ಪ ಡಬ್ಬೇರಮಡು, ಹುಲಗಪ್ಪ ಕುಣೇಕೆಲ್ಲೂರು, ಬಸವರಾಜ , ಬಾಳಪ್ಪ ಗೊರೆಬಾಳ, ಮೌನೇಶ ಐದನಾಳ, ಮರಿಸ್ವಾಮಿ ಗುಡದನಾಳ, ಹನುಮಂತ, ವೆಂಕಟೇಶ ಸೇರಿದಂತೆ ಇದ್ದರು.

ಕನ್ನಡ ಕಂಪನಿ ನಾಟಕಗಳು: ಪ್ರಸ್ತುತಿ ಮತ್ತು ಪರಂಪರೆ



ಕಲಬುರಗಿ, ಫೆ 22-

ಕಲಬುರಗಿ ನಾಟಕೋತ್ಸವ - 26 ರ ಅಂಗವಾಗಿ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ರಂಗಭೂಮಿ ಸಂವಾದ ಕಾರ್ಯಕ್ರಮದಲ್ಲಿ ಕನ್ನಡ ಕಂಪನಿ ನಾಟಕಗಳು: ಪ್ರಸ್ತುತಿ ಮತ್ತು ಪರಂಪರೆ ಕುರಿತಂತೆ ಹಿರಿಯ ರಂಗಕರ್ಮಿ ಹಾಗೂ ನಟಿ ಬಿ ಜಯಶ್ರೀ ಅವರು ತಮ್ಮ ತಂಡದೊಂದಿಗೆ ಹಳೆಯ ನಾಟಕಗಳ ಹಾಡುಗಳೊಂದಿಗೆ ಪ್ರಸ್ತುತಿ ಪಡಿಸಿದ ಕಾರ್ಯಕ್ರಮ ವಿಶೇಷವಾಗಿತ್ತು.

ಕನ್ನಡದ ಕಂಪನಿ ನಾಟಕಗಳ ಪ್ರಖ್ಯಾತ ಹಾಡುಗಳು ಪ್ರಸ್ತುತಿಯೊಂದಿಗೆ ಅದರ ಇತಿಹಾಸ ಹಾಗೂ ಹಾಡಿನ ಸುತ್ತಾ ನಡೆದ ಘಟನೆಗಳನ್ನು ಮೆಲುಕು ಹಾಕುತ್ತ ಸಂವಾದದಲ್ಲಿ ಮಾತನಾಡಿದ ಅವರು ಹಳೆಯ ಕಾಲದಲ್ಲಿ ಗ್ರಾಮೀಣ ಭಾಗದಲ್ಲಿ ಕಲ್ಚರ್ ಹಾಗೂ ಅಗ್ರಿಕಲ್ಚರ್ ನಡುವಿನ ಸಂಬಂಧವನ್ನು ಮನ ಮುಟ್ಟುವಂತೆ ವಿವರಿಸಿದರು.

ರಂಗಭೂಮಿ ಅಂದರೆ ಕೇವಲ ವೇದಿಕೆಯಲ್ಲ, ಅದೊಂದು ಜೀವಂತ ಸಂಸ್ಕೃತಿ. ಕಂಪನಿ ನಾಟಕದ ಶಿಸ್ತು ಒಬ್ಬ ಕಲಾವಿದನನ್ನು ಮನುಷ್ಯನನ್ನಾಗಿ ಮಾಡುತ್ತದೆ. ಎಂದು ಹೇಳಿದರು.

ಅಜ್ಜ ಗುಬ್ಬಿ ವೀರಣ್ಣನವರ ಕಾಲದ ರಂಗ ಸಜ್ಜಿಕೆ, ಶಿಸ್ತು ಮತ್ತು ಪ್ರೇಕ್ಷಕರನ್ನು ಆಕರ್ಷಿಸುತ್ತಿದ್ದ ಪರಿ ಹಾಗೂ ಹಾಡುಗಳನ್ನು ಕಟ್ಟುತ್ತಿದ್ದ ರೀತಿಯ ಕುರಿತು ಮಾತನಾಡಿದರು.

ಕಂಪನಿ ನಾಟಕಗಳ ಪರಂಪರೆಯ ಮುಂದುವರಿಕೆಯಾಗಿ ವೃತ್ತಿ ರಂಗಭೂಮಿಯ ಹಾಡುಗಾರಿಕೆ ಮತ್ತು ಅಭಿನಯದ ಶೈಲಿಯನ್ನು ಇಂದಿನ ತಲೆಮಾರಿಗೆ ತಮ್ಮ 'ಸ್ಪಂದನ' ತಂಡದ ಮೂಲಕ ಜೀವಂತವಾಗಿಡಲಾಗಿದೆ.

ಕಂಪನಿ ನಾಟಕಗಳ ಪ್ರಸ್ತುತಿ ಒಂದು ವಿಶೇಷ ಕಲೆ. ಅಲ್ಲಿ ಸಂಗೀತ, ನೃತ್ಯ ಮತ್ತು ಮಾತುಗಳ ಸಮ್ಮಿಲನವಿರುತ್ತದೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ರೆಸಾರ್ಟ್ ಲಾಬಿಗೆ ಮಣಿದ ಸರ್ಕಾರದಿಂದ ಬಂಡೀಪುರ-ನಾಗರಹೊಳೆ ಸಫಾರಿ ಪುನರಾರಂಭ: ರೈತರ ಆರೋಪ

ಮಾನವ-ವನ್ಯಜೀವಿ ಸಂಘರ್ಷ ತಡೆಯಲು ಗ್ರಾಮಗಳ ಅಂಚಿನಲ್ಲಿ ಬಲವಾದ ರೈಲ್ವೆ ಬ್ಯಾರಿಕೇಡ್ ನಿರ್ಮಿಸುವುದು ಅತ್ಯಂತ ಪರಿಣಾಮಕಾರಿಯಾಗಿರುವುದರಿಂದ ಎಲ್ಲ ಕಡೆ ಈ ವ್ಯವಸ್ಥೆಯಾದರೆ ಯಾವುದೇ ಸಮಸ್ಯೆ ಇರುವುದಿಲ್ಲ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.

ಬಂಡೀಪುರ ಮತ್ತು ನಾಗರಹೊಳೆ ರಾಷ್ಟ್ರೀಯ ಉದ್ಯಾನವನಗಳಲ್ಲಿ ಸಫಾರಿ ಪುನರಾರಂಭವಾಗಿದ್ದು, ರೈತ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಅಲ್ಲದೆ ಮೈಸೂರು ಅರಣ್ಯ ಭವನಕ್ಕೆ ಮುತ್ತಿಗೆ ಹಾಕಿ, ರೆಸಾರ್ಟ್ ಲಾಬಿಗೆ ಮಣಿದ ಸರ್ಕಾರ ಸ್ಥಳೀಯರ ಹಿತವನ್ನು ಲೆಕ್ಕಿಸದೆ ಸಫಾರಿ ನಡೆಸಲು ನಿರ್ಧಾರ ಕೈಗೊಂಡಿದೆ ಎಂಬ ಆರೋಪ ವ್ಯಕ್ತವಾಗಿದೆ.

ಮಾನವ-ಹುಲಿ ಸಂಘರ್ಷದ ಹಿನ್ನೆಲೆಯಲ್ಲಿ ಕಳೆದ 2025ರ ನವೆಂಬರ್ 7ರಿಂದ ವಿಶ್ವಪ್ರಸಿದ್ಧ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಸಫಾರಿಯನ್ನು ನಿಷೇಧಿಸಲಾಗಿತ್ತು. ಪ್ರವಾಸಿಗರ ಹಿತದೃಷ್ಟಿಯಿಂದ ಮತ್ತು ಇಲಾಖೆಯ ಆದಾಯದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದ್ದು, ಇದೀಗ ಫೆಬ್ರವರಿ 21ರಿಂದ ಸಫಾರಿ ಪುನರಾರಂಭವಾಗಿದೆ.

ಕಾಡಂಚಿನ ಗ್ರಾಮದಲ್ಲಿನ ಜನರು ಕೆಲವು ತಿಂಗಳ ಹಿಂದೆ ಮನೆಯಿಂದ ಆಚೆ ಬರಲು ಹೆದರುತ್ತಿದ್ದರು. ಕಾರಣ ಕಾಡಿನಲ್ಲಿದ್ದ ಪ್ರಾಣಿಗಳು ನಾಡಿಗೆ ಲಗ್ಗೆ ಇಟ್ಟಿದ್ದವು. ಅಷ್ಟೇ ಅಲ್ಲದೆ ಹುಲಿಗಳು ಗ್ರಾಮದ ಸುತ್ತ ಓಡಾಡುತ್ತಿದ್ದವು, ಜನ ಜಾನುವಾರುಗಳ ಮೇಲೆ ದಾಳಿ ಮಾಡಿ ದೊಡ್ಡ ಅನಾಹುತ ಉಂಟುಮಾಡಿದ್ದವು. ಇದೆಲ್ಲಕ್ಕೂ ಕಾರಣವಾಗಿದ್ದು, ಅಕ್ರಮವಾಗಿ ನಡೆಸುತ್ತಿದ್ದ ರೆಸಾರ್ಟ್‌ಗಳು ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ. ಇದೇ ಕಾರಣಕ್ಕೆ ಸಫಾರಿಗೆ ನಿರ್ಬಂಧ ಹೇರಲಾಗಿತ್ತು. ಆದರೆ ಸರ್ಕಾರ ಈಗ ಮತ್ತೆ ಆರಂಭ ಮಾಡಿರುವುದಕ್ಕೆ ಸಾಮಾನ್ಯ ಜನ, ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

''ಸಫಾರಿ ನಡೆದರೆ, ಕಾಡಿನಲ್ಲಿ ಜೆಸಿಬಿ ಹಾಗೂ ಇನ್ನಿತರೆ ವಾಹನ ಸಂಚಾರ ಮಾಡುವುದರಿಂದಾಗಿ ಹೆಚ್ಚುವ ಶಬ್ದದಿಂದ ಕಾಡಿನಲ್ಲಿರುವ ಪ್ರಾಣಿಗಳು ನಾಡಿಗೆ ಬರುತ್ತವೆ. ಸಾಕು ಪ್ರಾಣಿಗಳು ಮತ್ತು ಜನಸಾಮಾನ್ಯರ ಮೇಲೆ ದಾಳಿ ಮಾಡುತ್ತವೆ. ಸಫಾರಿ ನಿಷೇಧಕ್ಕೆ ಮೊದಲು ಇಂತಹ ದಾಳಿಗಳು ನಡೆದು ಹಲವು ಜನರು ಬಲಿಯಾಗಿದ್ದರು, ಸಾಕು ಪ್ರಾಣಿಗಳೂ ಕೂಡ ಕಾಡು ಪ್ರಾಣಿಗಳ ದಾಳಿಗೆ ತುತ್ತಾಗಿದ್ದವು. ಇದಾದ ನಂತರ ಕಾರ್ಯಪ್ರವೃತ್ತರಾದ ಅರಣ್ಯ ಇಲಾಖೆ ಸಿಬ್ಬಂದಿ ಹುಲಿಗಳನ್ನು ಸೆರೆಹಿಡಿಯುವ ಕೆಲಸಕ್ಕೆ ಕೈ ಹಾಕಿದ್ದರು. ಸದ್ಯಕ್ಕೆ ಈಗ ಹುಲಿಗಳ ಸಮಸ್ಯೆ ಇರಲಿಲ್ಲ. ಆದರೆ ಈಗ ಮತ್ತೆ ಸಫಾರಿ ಆರಂಭವಾಗಿರುವುದರಿಂದ ಮತ್ತೆ ಅದೇ ಸಮಸ್ಯೆ ಕಾಡಬಹುದು'' ಎಂಬುದು ಆತಂಕವಾಗಿದೆ.

ಸರ್ಕಾರ ಕೆಲವು ದಿನಗಳ ಹಿಂದೆ ಹಂತ ಹಂತವಾಗಿ ಸಫಾರಿ ಆರಂಭ ಮಾಡಲು ಸೂಚನೆ ( ) ನೀಡಿದ್ದು, ಇದರಿಂದ ಬಂಡೀಪುರ ಹಾಗೂ ನಾಗರಹೊಳೆಯ( ) ಸ್ಥಳೀಯ ನಿವಾಸಿಗಳು ದೊಡ್ಡ ಮಟ್ಟದ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಯಾವುದೇ ಕಾರಣಕ್ಕೂ ಸಫಾರಿ ಆರಂಭ ಮಾಡಬಾರದು ಹಾಗೂ ಇಲ್ಲಿರುವ ಸಾಕಷ್ಟು ರೆಸಾರ್ಟ್‌ಗಳು ಅಕ್ರಮ ಎಂದು ರೈತರು ಹಾಗೂ ಪ್ರಗತಿಪರ ಸಂಘಟನೆಗಳು ಆಗ್ರಹ ಮಾಡುತ್ತಿದ್ದರೆ, ಅತ್ತ ರೆಸಾರ್ಟ್ ನಂಬಿಕೊಂಡು ಜೀವನ ಮಾಡುತ್ತಿದ್ದ ಆದಿವಾಸಿಗಳು, ರೆಸಾರ್ಟ್ ಮಾಲೀಕರು ಹಾಗೂ ಇನ್ನಿತರರು ಇದನ್ನು ಸ್ವಾಗತ ಮಾಡಿದ್ದಾರೆ. ಇದೇ ಕಾರಣಕ್ಕೆ ಕೆಲವು ದಿನಗಳಿಂದ ಈ ಭಾಗದಲ್ಲಿ ದೊಡ್ಡ ನಾಟಕೀಯ ಬೆಳವಣಿಗೆ ನಡೆಯುತ್ತಿದೆ.

ಸಫಾರಿಯನ್ನು ಪುನಃ ತೆರೆಯುವುದನ್ನು ವಿರೋಧಿಸಿ ರೈತರು ಪ್ರತಿಭಟನೆಗೆ ಮುಂದಾದಾಗ ರೆಸಾರ್ಟ್ ಮಾಲೀಕರ ಬೆಂಬಲಿಗರು ಸಫಾರಿಯನ್ನು ಮತ್ತೆ ತೆರೆಯುವಂತೆ ಒತ್ತಾಯಿಸುವ ಫಲಕಗಳನ್ನು ಹಿಡಿದುಕೊಂಡು, ರೆಸಾರ್ಟ್ ಲಾಬಿ ರೈತರ ಪ್ರತಿಭಟನಾ ಸ್ಥಳಕ್ಕೆ ಪ್ರವೇಶಿಸಿ ಅವಾಂತರ ಸೃಷ್ಟಿಸಿತ್ತು. ಇದರಿಂದಾಗಿ ಪ್ರತಿಭಟನಾ ಸ್ಥಳದಲ್ಲಿ ದೊಡ್ಡ ಮಟ್ಟದ ವಾಗ್ವಾದ, ತಳ್ಳಾಟ ಮತ್ತು ಜಗಳಗಳಿಗೆ ಕಾರಣವಾಯಿತು.

ಉದ್ವಿಗ್ನತೆ ಹೆಚ್ಚುತ್ತಿದ್ದುದ್ದನ್ನು ಅರಿತ ಪೊಲೀಸರು ಕೂಡಲೇ ಮಧ್ಯಪ್ರವೇಶಿಸಿ 20 ಕ್ಕೂ ಹೆಚ್ಚು ರೆಸಾರ್ಟ್ ಬೆಂಬಲಿಗರನ್ನು ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆಗಾಗಿ ಅವರನ್ನು ತೆರಕಣಾಂಬಿ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಅದೇ ಸಮಯದಲ್ಲಿ, ಪೊಲೀಸರು ಪ್ರತಿಭಟನಾನಿರತ ರೈತರನ್ನು ಸ್ಥಳದಿಂದ ತೆರವುಗೊಳಿಸಲು ಪ್ರಯತ್ನಿಸಿದರು. ಇದರ ಪರಿಣಾಮವಾಗಿ ರೈತರು ಮತ್ತು ಪೊಲೀಸ್ ಸಿಬ್ಬಂದಿ ನಡುವೆ ಮಾತಿನ ಚಕಮಕಿ ಹಾಗೂ ಸಣ್ಣಪುಟ್ಟ ದೈಹಿಕ ಘರ್ಷಣೆಗಳು ನಡೆದವು. ಹಾಗಾಗಿ ಪೊಲೀಸರು ಪ್ರತಿಭಟನಾನಿರತ ರೈತರನ್ನು ಬಂಧಿಸಿ ಸರ್ಕಾರಿ ಸಾರಿಗೆ ಬಸ್‌ನಲ್ಲಿ ಬೇಗೂರು ಪೊಲೀಸ್ ಠಾಣೆಗೆ ಕರೆದೊಯ್ದರು. ಬಂಡೀಪುರ ಪ್ರದೇಶದ ಮೇಲುಕಮನಹಳ್ಳಿ ಬಳಿ ಇಡೀ ಕಾರ್ಯಾಚರಣೆ ನಡೆಯಿತು.

ರೈತ ಸಂಘದ ಮುಖಂಡರಾದ ಹೊನ್ನೂರು ಪ್ರಕಾಶ್ ಈ ದಿನ.ಕಾಮ್‌ನೊಂದಿಗೆ ಮಾತನಾಡಿ, ''ಬಂಡೀಪುರ-ನಾಗರಹೊಳೆ ಬೆಲ್ಟ್‌ನಲ್ಲಿ ಕಳೆದ 2025ರ ಅಕ್ಟೋಬರ್‌ನವೆಂಬರ್ ವೇಳೆ ಹುಲಿ ದಾಳಿಯಿಂದ 3 ಸಾವುಗಳು ಸಂಭವಿಸಿವೆ. ಅದೂ ಕೂಡ ಒಂದು ತಿಂಗಳೊಳಗೆ ಪ್ರತ್ಯೇಕ ಘಟನೆಗಳಲ್ಲಿ ಮೂವರು ರೈತರು ಸಾವನ್ನಪ್ಪಿದ್ದರು. ಈ ಭೀಕರ ದಾಳಿ ಜನರನ್ನು ಮನೆಯಿಂದ ಆಚೆ ಬಾರದಂತೆ ಮಾಡಿತ್ತು. ಬಂಡೀಪುರ ಹುಲಿ ಅಭಯಾರಣ್ಯ ವ್ಯಾಪ್ತಿಯಲ್ಲಿ 56 ವರ್ಷದ ಅರಣ್ಯ ವೀಕ್ಷಕರೊಬ್ಬರು ಕರ್ತವ್ಯದಲ್ಲಿದ್ದಾಗಲೇ ದಾಳಿಗೆ ಒಳಗಾಗಿದ್ದರು. ಇಷ್ಟು ಮಾತ್ರವಲ್ಲದೆ ಸಾಕಷ್ಟು ಜಾನುವಾರುಗಳು ಬಲಿಯಾಗಿವೆ'' ಎಂದು ಹೇಳಿದರು.

''ಈ ಸರ್ಕಾರಕ್ಕೆ ನಮ್ಮ ಜೀವಕ್ಕಿಂತ ಆದಾಯವೇ ಮುಖ್ಯವಾಯಿತೇ? ಸಫಾರಿ ವಾಹನಗಳ ಸದ್ದು ಕೇಳುತ್ತಿದ್ದಂತೆಯೇ ಆನೆ, ಚಿರತೆ, ಕಾಡುಹಂದಿಯಂತಹ ಪ್ರಾಣಿಗಳು ಗಾಬರಿಗೊಂಡು ಗಡಿ ಗ್ರಾಮಗಳತ್ತ ಧಾವಿಸುತ್ತವೆ. ತಮ್ಮ ಆಹಾರಕ್ಕಾಗಿ ಅಲ್ಲಿಯ ಸಾಕು ಪ್ರಾಣಿಗಳು ಮತ್ತು ಜನರ ಮೇಲೆ ದಾಳಿ ನಡೆಸಿ ಬಲಿ ತೆಗೆದುಕೊಳ್ಳುತ್ತವೆ. ಆದರೆ, ಸಫಾರಿ ಬಂದ್ ಆದ ನಂತರ ಇಂತಹ ಸಂಘರ್ಷ ತಗ್ಗಿತ್ತು. ಈಗ ಲಾಭ, ನಷ್ಟಗಳ ಲೆಕ್ಕಾಚಾರದಿಂದ ಸರ್ಕಾರ ಸಫಾರಿ ನಡೆಸುತ್ತಿರುವುದರಿಂದ ಸ್ಥಳೀಯ ರೈತರಿಗೆ ಸಫಾರಿಯಿಂದ ಒಂದು ಪೈಸೆ ಲಾಭವಿಲ್ಲ. ಕೇವಲ ಬೆಂಗಳೂರು-ಮೈಸೂರು ರೆಸಾರ್ಟ್ ಮಾಲೀಕರಿಗೆ ಲಾಭ. ಸರ್ಕಾರ ರೆಸಾರ್ಟ್ ಲಾಬಿಗೆ ಮಣಿದಿದೆ. ರೈತರ ಜೀವಕ್ಕಿಂತ ಬಂಡವಾಳಶಾಹಿಗಳಿಗೆ ಪ್ರಾಮುಖ್ಯತೆ ನೀಡಿದೆ'' ಎಂದು ದೂರಿದರು.

ಮಂಜು ಕಿರಣ್ ಈ ದಿನ.ಕಾಮ್‌ನೊಂದಿಗೆ ಮಾತನಾಡಿ, ''ಪ್ರಾಣಿಗಳ ದಾಳಿಗೆ ಮೃತಪಟ್ಟಿರುವವರ ಕುಟುಂಕ್ಕೆ ₹20 ಲಕ್ಷ ಪರಿಹಾರ ಕೊಡುವುದಾಗಿ ಸರ್ಕಾರ ಹೇಳಿದೆ. ಆದರೆ, ಕನಿಷ್ಠ ₹1 ಕೋಟಿ + ಕುಟುಂಬಕ್ಕೊಬ್ಬರಿಗೆ ಸರ್ಕಾರಿ ಉದ್ಯೋಗ ನೀಡಬೇಕೆಂಬುದು ನಮ್ಮ ಒತ್ತಾಯವಾಗಿದೆ. ಇಷ್ಟಾದರೂ ಮತ್ತೆ ಸಫಾರಿ ಆರಂಭಿಸಿದ್ದಾರೆ. ಇದರ ವಿರುದ್ಧ ಫೆಬ್ರವರಿ 19-20ರಂದು ಮೈಸೂರು ಅರಣ್ಯ ಭವನ, ಬಂಡೀಪುರ ಅರಣ್ಯ ಕಚೇರಿ ಬಳಿ ಪ್ರತಿಭಟನೆ ನಡೆಸಿ ಮುತ್ತಿಗೆಗೆ ಯತ್ನಿಸಿದಾಗ 20ಕ್ಕೂ ಅಧಿಕ ಮಂದಿ ರೈತರನ್ನು ಪೊಲೀಸರು ವಶಕ್ಕೆ ಪಡೆದರು'' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮತ್ತೊಂದೆಡೆ, ಪ್ರವಾಸೋದ್ಯಮ ಮತ್ತು ವ್ಯವಹಾರಕ್ಕೆ ಸಫಾರಿಯನ್ನು ಮತ್ತೆ ತೆರೆಯುವುದು ಅತ್ಯಗತ್ಯವೆಂದು ರೆಸಾರ್ಟ್ ಮಾಲೀಕರು ವಾದಿಸಿದ್ದು, ಲಾಬಿ ಪ್ರಯತ್ನಗಳನ್ನು ತೀವ್ರಗೊಳಿಸಿದ್ದಾರೆ. ಇನ್ನು ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಪ್ರಕರಣಗಳನ್ನು ದಾಖಲಿಸಿ ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ.

ಈ ನಡುವೆ ಸರ್ಕಾರ ಇದೀಗ ಸಫಾರಿಯಮನ್ನು ಪುನರಾರಂಭಗೊಳಿಸಿದ್ದು, ''ಮೊದಲು ಬಳಕೆಯಲ್ಲಿದ್ದ ಸಫಾರಿ ವಾಹನಗಳು ಮತ್ತು ಸಿಬ್ಬಂದಿಗಳ ಪೈಕಿ ಶೇ.50 ರಷ್ಟು ಮಾತ್ರ ನಿಯೋಜಿಸಬೇಕು. ಮುಖ್ಯವಾಗಿ ಬಸ್‌ಗಳ ಮೂಲಕ ಕಾರ್ಯಾಚರಣೆ ನಡೆಸಬೇಕು. ತಾಂತ್ರಿಕ ಸಮಿತಿ ವರದಿ ಮತ್ತು ಆರ್ಥಿಕ ನಷ್ಟವನ್ನು ಗಮನಿಸಿ ಕ್ಯಾಂಪರ್‌ಗಳು ಮತ್ತು ಜೀಪ್‌ಗಳ ಕನಿಷ್ಠ ಬಳಕೆಯೊಂದಿಗೆ ಸಫಾರಿ ನಡೆಸಲು ವಿವರವಾದ ಸೂಚನೆಗಳನ್ನು ನೀಡಲಾಗುವುದು. ಜತೆಗೆ ನಿಗದಿತ ಷರತ್ತುಗಳ ಯಾವುದೇ ಉಲ್ಲಂಘನೆಯಾದಲ್ಲಿ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು'' ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ.

ಸಫಾರಿ ಆರಂಭವಾದರೂ ಪ್ರವಾಸಿಗರಿಗೆ ಮತ್ತು ಸಫಾರಿ ಆಯೋಜಕರಿಗೆ ಅರಣ್ಯ ಇಲಾಖೆ ಕೆಲವು ಕಟ್ಟುನಿಟ್ಟಿನ ನಿಯಮಗಳನ್ನು ವಿಧಿಸಿದೆ. ಕಾಡಿನ ಒಳಭಾಗದಲ್ಲಿ ಪ್ರಾಣಿಗಳ ಚಲನವಲನಕ್ಕೆ ತೊಂದರೆಯಾಗದಂತೆ ಸಫಾರಿ ವಾಹನಗಳ ಸಂಖ್ಯೆಯನ್ನು ಸೀಮಿತಗೊಳಿಸಲಾಗಿದೆ. ಅಲ್ಲದೆ, ಪ್ರಾಣಿಗಳು ಕಾಣಿಸಿಕೊಂಡಾಗ ವಾಹನಗಳನ್ನು ದೀರ್ಘಕಾಲ ನಿಲ್ಲಿಸುವಂತಿಲ್ಲ ಮತ್ತು ಅತಿ ಹೆಚ್ಚು ಶಬ್ದ ಮಾಡುವಂತಿಲ್ಲ ಎಂಬ ಸೂಚನೆ ನೀಡಲಾಗಿದೆ.

ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಸಫಾರಿ ಸೇವೆಗಳನ್ನು ಮತ್ತೆ ತೆರೆದಿರುವ ರಾಜ್ಯ ಸರ್ಕಾರದ ನಡೆಯನ್ನು ಖಂಡಿಸಿ ರೈತರು ಸುರಕ್ಷತೆ, ಕೃಷಿ ಮತ್ತು ಸ್ಥಳೀಯ ಜೀವನೋಪಾಯದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದು, ಮತ್ತೆ ಆರಂಭಿಸಿರುವ ಸಫಾರಿಯನ್ನು ನಿಷೇಧಿಸುವಂತೆ ಮತ್ತಷ್ಟು ಸಭೆಗಳನ್ನು ಸಡೆಸಿ ತೀವ್ರ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ.

ಮುಂದಿರುವ ಸವಾಲುಗಳೇನು?

ಬಂಡೀಪುರ-ನಾಗರಹೊಳೆಯಲ್ಲಿ ಹುಲಿಗಳ ಸಂಖ್ಯೆ ಸಾಮರ್ಥ್ಯಕ್ಕಿಂತ ಹೆಚ್ಚಾಗುತ್ತಿದೆ. ಕಾಡಿನ ಒಳಗೆ ಲಂಟಾನ ಮತ್ತು ಸೆನ್ನಾ ಸ್ಪೆಕ್ಟಾಬಿಲಿಸ್‌ನಂತಹ ಆಕ್ರಮಣಕಾರಿ ಸಸ್ಯಗಳು ಬೆಳೆದಿರುವುದರಿಂದ ಸಸ್ಯಾಹಾರಿ ಪ್ರಾಣಿಗಳಿಗೆ ಮೇವಿನ ಕೊರತೆಯಾಗಿದೆ. ಆಹಾರವಿಲ್ಲದೆ ಜಿಂಕೆ, ಕಾಡುಹಂದಿಗಳು ಹೊಲಗಳಿಗೆ ನುಗ್ಗುತ್ತಿವೆ, ಅವುಗಳನ್ನು ಬೆನ್ನಟ್ಟುತ್ತ ಬರುವ ಹುಲಿಗಳೂ ಜನವಸತಿ ಪ್ರದೇಶಕ್ಕೆ ಬರುತ್ತಿವೆ. ಸಫಾರಿಯನ್ನು ಅನಿರ್ದಿಷ್ಟಾವಧಿಗೆ ನಿಲ್ಲಿಸಿದರೆ ಆರ್ಥಿಕ ನಷ್ಟವಾಗುತ್ತದೆಂದು ಸರ್ಕಾರ ಯೋಚಿಸಿದರೆ, ಇದರಿಂದ ಪ್ರವಾಸಿಗರ ಸುರಕ್ಷತೆ ಮತ್ತು ಸ್ಥಳೀಯರ ಸಂರಕ್ಷಣೆ ಹೇಗೆ ಎಂಬ ಭೀತಿ ಎದುರಾಗಿದೆ.


ಪರಿಹಾರಗಳು ಏನು?

ಅತಿಹೆಚ್ಚು ಹುಲಿಗಳಿರುವ ಈ ಕಾಡುಗಳಿಂದ ಕೆಲವು ಹುಲಿಗಳನ್ನು ಹುಲಿಗಳ ಸಂಖ್ಯೆ ಕಡಿಮೆ ಇರುವ ಬೇರೆ ಕಾಡುಗಳಿಗೆ(ಉದಾಹರಣೆಗೆ ಮಲೆಮಹದೇಶ್ವರ ಬೆಟ್ಟ ಅಥವಾ ಭದ್ರಾ) ಸ್ಥಳಾಂತರಿಸುವುದು ಉತ್ತಮವೆಂದು ಸ್ಥಳೀಯರು ಆಗ್ರಹ ಮಾಡುತ್ತಿದ್ದಾರೆ.

ಕಾಡುಗಳ ನಡುವೆ ಇರುವ ಅಡೆತಡೆಗಳನ್ನು ನಿವಾರಿಸಿ, ಪ್ರಾಣಿಗಳು ಒಂದು ಕಾಡಿನಿಂದ ಇನ್ನೊಂದು ಕಾಡಿಗೆ ಹೋಗಲು ಮುಕ್ತ ಅವಕಾಶ ಕಲ್ಪಿಸಿದರೆ ಇದರಿಂದ ಹುಲಿಗಳು ಒಂದೇ ಕಡೆ ಕೇಂದ್ರೀಕೃತವಾಗುವುದು ತಪ್ಪುತ್ತದೆ. ಮಾನವ-ವನ್ಯಜೀವಿ ಸಂಘರ್ಷ ತಡೆಯಲು ಗ್ರಾಮಗಳ ಅಂಚಿನಲ್ಲಿ ಬಲವಾದ ರೈಲ್ವೆ ಬ್ಯಾರಿಕೇಡ್ ನಿರ್ಮಿಸುವುದು ಅತ್ಯಂತ ಪರಿಣಾಮಕಾರಿಯಾಗಿರುವುದರಿಂದ ಎಲ್ಲ ಕಡೆ ಈ ವ್ಯವಸ್ಥೆಯಾದರೆ ಯಾವುದೇ ಸಮಸ್ಯೆ ಇರುವುದಿಲ್ಲ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.

ಹಾಸನ ಮಣ್ಣಿನ ಹೆಣ್ಣು ಬೇರುಗಳು ಸ್ತ್ರೀ ಲೋಕದ ಅಸ್ಮಿತೆ- ಪದ್ಮಾ ಶ್ರೀರಾಮ್

ಹಾಸನ ಜಿಲ್ಲೆಯ ಹೆಣ್ಣುಮಕ್ಕಳು ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಸದ್ದಿಲ್ಲದೆ ಕೆಲಸ ಮಾಡುತ್ತಾ, ತಮ್ಮ ಛಾಪು ಮೂಡಿಸುತ್ತ, ಕೊಡುಗೆ ನೀಡುತ್ತಾ, ಸಾಧಿಸುತ್ತಾ ಹೋಗಿದ್ದಾರೆ. ಇದು, ಅವರ ಕುರಿತು ವಿವಿಧ ಲೇಖಕ/ಲೇಖಕಿಯರಿಂದ ಒಂದು ಪುಟ್ಟ ದಾಖಲೀಕರಣ



ಸರಳತೆಯ ಸಾಕಾರಮೂರ್ತಿಯಂತಿರುವ ಪದ್ಮಾ ಶ್ರೀರಾಮ್ ಅವರ ವ್ಯಕ್ತಿತ್ವಕ್ಕೆ ಹಲವು ಛಾಯೆಗಳಿವೆ. ಬರವಣಿಗೆ, ಸಾಮಾಜಿಕ ಹೋರಾಟ, ಪುಸ್ತಕ ಪ್ರಕಾಶನ, ಅನುವಾದ, ಕೃಷಿ- ಇವು ಅವರ ಬದುಕಿನ ಹುಡುಕಾಟದ ಕೆಲವು ದಾರಿಗಳು. ನಾನು ಹಿನ್ನೆಲೆ ಗಾಯಕಿ ಆಗಬೇಕು ಅಂತಿದ್ದೆ, ಇನ್ನೂ ಕೆಲವು ಸರ್ತಿ ನ್ಯಾಚುರಲಿಸ್ಟ್ ಆಗಬೇಕು ಅನ್ನಿಸ್ತಿತ್ತು ಎಂದು ಒಂದು ಸಂದರ್ಶನದಲ್ಲಿ ಹೇಳಿಕೊಂಡಿರುವುದು ಪದ್ಮಾ ಅವರ ಜೀವನೋತ್ಸಾ ಹಕ್ಕೆ ಹಿಡಿದ ಕನ್ನಡಿ.

ಪದ್ಮಾ ಶ್ರೀರಾಮ್ ಅವರು ಹುಟ್ಟಿದ್ದು 1943ರಲ್ಲಿ ಹಾಸನದಲ್ಲಿ. ಇವರ ತಂದೆ ಎಂ.ಆರ್.ಪುಟ್ಟಸ್ವಾಮಯ್ಯ, ತಾಯಿ ದೇವಮ್ಮ. ದೇವಮ್ಮನವರು ಶ್ರೀರಂಗಪಟ್ಟಣದ ಹೆಸರಾಂತ ಚೌಬೀನಿ ಮನೆತನಕ್ಕೆ ಸೇರಿದವರು. ಪುಟ್ಟಸ್ವಾಮಯ್ಯನವರು ಮೂವತ್ತು-ನಲವತ್ತರ ದಶಕದಲ್ಲೇ ಹೆಸರಾಂತ ಅಬಕಾರಿ ಕಂಟ್ರಾಕ್ಟರ್ ಆಗಿದ್ದವರು. ಜಮೀನ್ದಾರರು, ಹಾಸನದ ಪಿಕ್ಚರ್ ಪ್ಯಾಲೇಸ್ ಚಿತ್ರಮಂದಿರದ ಒಡೆಯರು. ಇವರ ಸ್ನೇಹವಲಯ ದೊಡ್ಡದಿದ್ದದ್ದರಿಂದ ಎಲ್ಲ ಜಾತಿಯ, ಹಲವು ರೀತಿಯ ಜನಗಳು ಇವರ ಮನೆಗೆ ಬರುತ್ತಿದ್ದರು. ಇವೆಲ್ಲದರ ಸಕಾರಾತ್ಮಕ ಪ್ರಭಾವ ಸಹಜವಾಗಿಯೇ ಪದ್ಮಾ ಅವರ ಮೇಲೆ ಆಗಿದೆ. ಜೊತೆಗೆ, ಒಕ್ಕಲು ಕುಟುಂಬದ ಹಿನ್ನೆಲೆ ಇದ್ದದ್ದರಿಂದ ಒಕ್ಕಲು ಕುಟುಂಬದ ಕೆಲಸಗಳು, ಅದರ ಸರಳ ಜೀವನ ಕ್ರಮಗಳೂ ಪದ್ಮಾ ಅವರ ಬದುಕಿನ ಭಾಗವಾಗಿದೆ.

ಪದ್ಮಾ ಅವರು ಮೂರನೇ ತರಗತಿಯವರೆಗಿನ ವಿದ್ಯಾಭ್ಯಾಸವನ್ನು ಹಾಸನದ ವಾಣಿವಿಲಾಸ ಶಾಲೆಯಲ್ಲಿ, ನಂತರ ಸಂತಫಿಲೋಮಿನಾ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದರು. ಬೆಂಗಳೂರಿನ ಮೌಂಟ್‌ಕಾರ್ಮಲ್ ಕಾಲೇಜಿನಲ್ಲಿ ತಮ್ಮ ಇಷ್ಟದ ಬಾಟನಿ, ಜುವಾಲಜಿ ವಿಷಯಗಳಲ್ಲಿ ಬಿಎಸ್‌ಸಿ ಓದಿದರು. ಎಂಎಸ್ಸಿ ಯನ್ನು ಸೆಂಟ್ರಲ್ ಕಾಲೇಜಿನಲ್ಲಿ ಮುಗಿಸಿದರು. ಸಮಾಜವಾದಿ ವಿಚಾರಗಳಿಂದ ಪ್ರಭಾವಿತರಾಗಿದ್ದ, ಪೂರ್ಣಚಂದ್ರ ತೇಜಸ್ವಿಯವರ ಒಡನಾಡಿ ಶ್ರೀರಾಮ್ ಅವರನ್ನು ಪ್ರೀತಿಸಿ ವಿವಾಹವಾದ ನಂತರ ಸರಳ ಬದುಕು ಇವರಿಬ್ಬರ ಮಂತ್ರವಾಯಿತು. ಹೆಣ್ಣುಮಕ್ಕಳು ಸಾರ್ವಜನಿಕ ಪ್ರತಿಭಟನೆ, ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಮನಸ್ಥಿತಿ ಅಷ್ಟೇನೂ ಇಲ್ಲದ ಕಾಲದಲ್ಲಿ ಪದ್ಮಾ ಅವರು ಶ್ರೀರಾಮ್ ಅವರ ಪ್ರೋತ್ಸಾಹದಿಂದ ಮತ್ತು ಸಮತಾ ಸಂಘಟನೆಯ ಮೂಲಕ ಹಲವು ಕಾರ್ಯಕ್ರಮಗಳಲ್ಲಿ ತೊಡಗಿಕೊಂಡರು. ಲೇಖಕಿ, ಅನುವಾದಕಿಯಾಗಿ ಗುರುತಿಸಿಕೊಂಡರು.

ಪದ್ಮಾ ಅವರಿಗೆ ಚಿಕ್ಕಂದಿನಿಂದ ಗಿಡಗಳನ್ನು ಕುರಿತು ವಿಶೇಷ ಆಸಕ್ತಿ. ಕುಟುಂಬದ ವಾತಾವರಣದಲ್ಲಿದ್ದ ವೈಜ್ಞಾನಿಕ ಹಿನ್ನೆಲೆಯ ಕಾರಣವೂ ಸೇರಿಕೊಂಡು ಬರವಣಿಗೆಗೆ ಇವರ ಮನಸ್ಸು ಒಲಿಯಿತು. ಇತ್ತೀಚೆಗೆ ಮಯೂರ ಮಾಸಪತ್ರಿಕೆಯಲ್ಲಿ ಜ.ನಾ.ತೇಜಶ್ರೀಯವರು ಮಾಡಿದ ಪದ್ಮಾ ಅವರ ದೀರ್ಘ ಸಂದರ್ಶನದಲ್ಲಿ ಪದ್ಮಾ ಅವರು ''ಬರೀ ವೈಜ್ಞಾನಿಕವಾಗಿ ಒಂದು ಗಿಡ ಅಥವಾ ಹೂವಿನ ಬಗ್ಗೆ ಹೇಳ್ತಾ ಹೋದ್ರೆ, ವಿಜ್ಞಾನದ ಹಿನ್ನೆಲೆ ಇರದೇ ಇರುವವರಿಗೆ ಅದನ್ನು ಓದೋದು ಬರಡು, ಹೊರೆ ಅನ್ನಿಸುತ್ತೆ ಅಲ್ವಾ? ಒಂದು ಹೂವನ್ನ, ಗಿಡವನ್ನ ನೋಡ್ತಾ ಇದ್ರೆ ನಮ್ಮ ಮನಸ್ಸಿಗೆ ಹಲವಾರು ವಿಷಯಗಳು ಬಂದು ಹೋಗ್ತವೆ, ಹಾಗೆ ಸಹಜವಾಗಿ ಅನ್ನಿಸಿದ್ದನ್ನು ನಾನು ಬರೀತಾ ಹೋದೆ ಅಷ್ಟೆ. ವೈಜ್ಞಾನಿಕ ವಿವರಗಳೂ ಅದರಲ್ಲಿ ಬರ್ತವೆ, ಆದರೆ ಕಡಿಮೆ. ಬಹುಶಃ ಈ ತರದ ಅನಿಸಿಕೆ, ನೋಟವು ನನ್ನ ವಿಜ್ಞಾನೇತರ ಪುಸ್ತಕಗಳ ಅಂದರೆ, ಕತೆ, ಬೇರೆಬೇರೆ ಅನುವಾದಗಳ ಓದಿನಿಂದ ಬಂದಿರಬಹುದು. ಹಾಗೂ ನಾನು ಬರೆಯೋದು ಸರಳವಾಗಿರಬೇಕು, ಬೇರೆಯವರಿಗೆ ಅರ್ಥ ಆಗಬೇಕು ಅನ್ನೋ ನಿಲುವಿನಿಂದಲೂ ನನ್ನ ಶೈಲಿ ರೂಪುಗೊಂಡಿರಬಹುದು'' ಎನ್ನುವ ಮಾತುಗಳು ಬರವಣಿಗೆಯಲ್ಲಿ ತೊಡಗಿರುವ ಪ್ರತಿಯೊಬ್ಬರಿಗೂ ಮನನ ಯೋಗ್ಯವಾದುದು. ಹಾಗೂ ಇವರ ಗಿಡಗಂಟೆಯಾ ಕೊರಳು ಕೃತಿಯ ಲೇಖನಗಳನ್ನು ನಾವು ಈ ಹಿನ್ನೆಲೆಯಲ್ಲಿ ಓದಬೇಕು.

ಪದ್ಮಾ ಶ್ರೀರಾಮ್

ಬರವಣಿಗೆಯ ಆರಂಭಿಕ ಕಾಲದಲ್ಲಿ ಲಂಕೇಶ್ ಪತ್ರಿಕೆಯಲ್ಲಿ ಪದ್ಮಾ ಅವರು ನಿಯಮಿತವಾಗಿ ಬರೆದರು. ಲಂಕೇಶ್ ಅವರು ಇವರಿಗೆ ನೀಡಿದ ಸಕಾಲಿಕ ಸಲಹೆ ಮತ್ತು ಮಾರ್ಗದರ್ಶನವು ಪದ್ಮಾ ಅವರ ಬರವಣಿಗೆ ಕೌಶಲ್ಯವನ್ನು ಸಾಣೆ ಹಿಡಿಯಿತು. ಶ್ರೀರಾಮ್ ಮತ್ತು ಪೂರ್ಣಚಂದ್ರ ತೇಜಸ್ವಿಯವರ ಮುಖೇನ ರಾಮಮನೋಹರ ಲೋಹಿಯಾ ಅವರ ಬರವಣಿಗೆಯ ಪ್ರಭಾವ ಕೂಡ ಪದ್ಮಾ ಅವರ ಮೇಲೆ ದಟ್ಟವಾಗಿ ಆಯಿತು. ಚಿಂತಕ, ಹೋರಾಟಗಾರರಾಗಿದ್ದ ಕಿಶನ್ ಪಟ್ನಾಯಕ್ ಅವರ ಸ್ನೇಹ ಮತ್ತು ವಿಚಾರಗಳು ಪದ್ಮಾ ಅವರ ವ್ಯಕ್ತಿತ್ವವನ್ನು ಬೆಳೆಸಿದೆ.

1967ರಲ್ಲಿ ವಿಧಾನಸಭೆಯ ಕಲಾಪಗಳು ಹೇಗೆ ನಡೆಯುತ್ತವೆ ಎಂದು ನೋಡಬೇಕೆಂಬ ಕುತೂಹಲದಿಂದ ಪದ್ಮಾ ಅವರು ವಿಧಾನಸೌಧಕ್ಕೆ ಹೋಗುತ್ತಾರೆ. ಆ ದಿನ ಶಾಂತವೇರಿ ಗೋಪಾಲಗೌಡರು ತಮ್ಮ ವಿಚಾರಗಳನ್ನು ಅಲ್ಲಿ ಮಂಡಿಸಿದ ರೀತಿ, ಅವರ ಬದ್ಧತೆ ಇವರನ್ನು ರೋಮಾಂಚನಗೊಳಿಸುತ್ತದೆ. ಗೋಪಾಲಗೌಡರು ಮೈಸೂರು ಮಹಾರಾಜರ ವಿರುದ್ಧದ ಪ್ರತಿಭಟನೆ ಬಗ್ಗೆ ಮಾತನಾಡುತ್ತ ಕೋಪಗೊಂಡು ತಮ್ಮ ಕೈಯಲ್ಲಿದ್ದ ಟಿಪ್ಪಣಿ ಕಾಗದವನ್ನು ಹರಿದು ನೆಲಕ್ಕೆ ಹಾಕಿ ಹೊಸಕಿ ಸಭಾತ್ಯಾಗ ಮಾಡುತ್ತಾರೆ. ಗೋಪಾಲಗೌಡರ ಪ್ರಾಮಾಣಿಕತೆ, ಧೈರ್ಯವು ಒಬ್ಬ ಮನುಷ್ಯನಿಗೆ ಆತ್ಮಗೌರವ ಎಷ್ಟು ಮುಖ್ಯ ಎಂಬುದನ್ನು ಕಲಿಸಿತು ಎಂದು ಪದ್ಮಾ ಅವರು ನೆನಪಿಸಿಕೊಳ್ಳುತ್ತಾರೆ.


2021ರಲ್ಲಿ ಪದ್ಮಾ ಅವರು ತಮಿಳಿನ ಪ್ರಸಿದ್ಧ ಲೇಖಕಿ ಬಾಮ ಅವರ ಸಂಗತಿ ಕಾದಂಬರಿಯನ್ನು ಅದೇ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ದಲಿತ ಕ್ರಿಶ್ಚಿಯನ್ ಕುಟುಂಬದ ಸಂಕಷ್ಟಗಳು, ಬವಣೆ, ಅವರು ಶೋಷಣೆಗೆ ಒಳಪಡುವ ರೀತಿ ತಮ್ಮ ಮನಸ್ಸನ್ನು ಕಲಕಿದ್ದರಿಂದ ಇದನ್ನು ಅನುವಾದಿಸಿದ್ದಾಗಿ ಪದ್ಮಾ ಅವರು ಹೇಳಿಕೊಂಡಿದ್ದಾರೆ. ನನ್ನ ಅಜ್ಜಿಯವರ ದೆಸೆಯಿಂದ ನನಗೆ ಸಂಭವಿಸಿದ ತಮಿಳು ಭಾಷಿಕರ ಒಡನಾಟ, ಇಂದಿಗೂ ನಡೆದುಕೊಂಡು ಬಂದಿರುವ ಅವರೊಂದಿಗಿನ ಪ್ರೀತಿ ವಿಶ್ವಾಸದಿಂದ ನನಗಿದ್ದ ಆ ಭಾಷೆಯ ಮೇಲಿನ ಅವ್ಯಕ್ತ ನಂಟು ಈ ಅನುವಾದಕ್ಕೆ ನನ್ನನ್ನು ಪರೋಕ್ಷವಾಗಿ ತೊಡಗಿಸಿತೆಂದು ತಿಳಿದಿದ್ದೇನೆ ಎಂದು ಈ ಕೃತಿಯ ಆರಂಭದಲ್ಲಿ ಅವರು ಬರೆದಿರುವ ಮಾತುಗಳು ಮನುಷ್ಯ ಸಂಬಂಧಗಳಲ್ಲಿನ ಅವರ ನಂಬಿಕೆಯ ಪ್ರತೀಕ. ಹಾಗೆ ಇದೇ ಪುಸ್ತಕದಲ್ಲಿ ಅವರು ಬರೆಯುವಂತೆ, ..ಮುಂದೆ ಹೆಣ್ಣು, ಗಂಡು ಒಂದೇ ಅನ್ನುವ ದಿನ ಬರುವುದರಲ್ಲಿ ಸಂದೇಹವಿಲ್ಲ. ಆಗ ಅನ್ಯಾಯ, ಹಿಂಸೆ, ತಾರತಮ್ಯಗಳು ಕೊನೆಯಾಗಿ ಹೆಣ್ಣುಗಳು ಕಟ್ಟಬಲ್ಲರು ಅಥವಾ ಕೆಡವಬಲ್ಲರು ಎನ್ನುವುದು ನಿಜವಾಗುತ್ತದೆ. ಇಂತಹ ಒಂದು ಕಾಲ ಬರುವುದೆಂದು ನನಗೆ ಆಶಾಭಾವನೆ ಇದೆ ಎನ್ನುವ ಮಾತುಗಳು ಹೆಣ್ಣಿನ ಶಕ್ತಿಯ ಮೇಲಿನ ಅವರ ವಿಶ್ವಾಸವನ್ನು ತೋರಿಸುತ್ತದೆ.

ಪದ್ಮಾ ಅವರು ರಾಷ್ಟ್ರಕವಿ ಕುವೆಂಪು ಮತ್ತು ತೇಜಸ್ವಿ ಅವರ ಕುಟುಂಬದ ಅತ್ಯಾಪ್ತರು. ಈ ಮಹಾನ್ ಲೇಖಕರ ಜೊತೆಗೆ ಅವರ ನೆನಪುಗಳು ನೂರಾರಿವೆ. ಸಂದರ್ಶನದಲ್ಲಿ ಅವರು ದಾಖಲಿಸಿರುವ ಒಂದು ನೆನಪು ಕುತೂಹಲಕಾರಿಯಾಗಿದೆ: ''ಕುವೆಂಪು ಅವರು ಸಾಮಾನ್ಯವಾಗಿ ಸಾಯಂಕಾಲ ನಾಲ್ಕು ಗಂಟೆಗೆ ಕಾಫಿ ಕುಡಿದು ವೆರಾಂಡದಲ್ಲಿ ಕುಳಿತಿರುತ್ತಿದ್ದರು. ನಾನು ಆ ಹೊತ್ತಿನಲ್ಲಿ ಹೋಗುತ್ತಿದ್ದೆ. ನಾನು ಹೋದ ಕೂಡಲೆ ಪದ್ಮಾ ಬನ್ನಿ ಅಂದು, ತಾರಿಣಿಯವರಿಗೆ, ಅಕ್ಕಾ ಪದ್ಮಾ ಬಂದಿದ್ದಾರೆ ನೋಡಿ ಅನ್ನುತ್ತಿದ್ದರು. ನಮ್ಮ ಮನೆಯಲ್ಲಿ ಆಗ ತುಂಬ ಬೆಟ್ಟದಾವರೆ, ಗುಲಾಬಿ ಹೂವಿನ ಗಿಡಗಳಿದ್ದವು. ನಾನು ಕುವೆಂಪು ಅವರ ಮನೆಗೆ ಹೋಗುವಾಗ ಕೆಲವೊಮ್ಮೆ ಹೂಗಳನ್ನು ತೆಗೆದುಕೊಂಡು ಹೋಗುತ್ತಿದ್ದೆ. ಯಾವಾಗಾದರೂ ಹೂವನ್ನು ಕೊಂಡೊಯ್ಯದೆ ಇದ್ದಾಗ ಅವರು, ಪದ್ಮಾ ಹೂ ತಂದಿಲ್ವಾ? ಅಂತ ಕೇಳುತ್ತಿದ್ದರು. ಒಂದು ಸರ್ತಿ ನಾನು ಹಾಸನದ ನನ್ನ ತಾಯಿ ಮನೆಗೆ ಹೋಗಿದ್ದೆ. ಮೂಡಿಗೆರೆಗೆ ಹೋಗಿ ಬರೋಣ ಅಂತ ರಾಜೇಶ್ವರಿ ಅವರಿಗೆ ಕರೆ ಮಾಡಿದೆ. ರಾಜೇಶ್ವರಿಯವರು ಮೂಡಿಗೆರೆಗೆ ಕುವೆಂಪು ಮತ್ತು ಹೇಮಾವತಿ ಅವರು ಬಂದಿರುವ ವಿಷಯ ತಿಳಿಸಿದರು. ಹಾಗಾಗಿ ನಾನು ಹೋಗೋದು ಸರಿ ಅಲ್ಲ ಅನ್ನಿಸಿ ಸುಮ್ಮನಾದೆ. ಸ್ವಲ್ಪ ಹೊತ್ತಿಗೆ ನನಗೆ ಕರೆ ಬಂತು, ಹೇಮಾವತಿ ಅವರು ಮಾಡಿದ್ದ ಕರೆ ಅದು. ಅತ್ತ ಕಡೆಯಿಂದ ಅವರು, ನೀವು ಯಾಕೆ ಮೂಡಿಗೆರೆಗೆ ಬರಲ್ಲ ಅಂತೀರ, ನನಗೋಸ್ಕರ ಬನ್ನಿ ಅಂದರು. ಅಷ್ಟು ದೊಡ್ಡವರು ಕರೆಯುವಾಗ ನಾನು ಹೋಗದೆ ಇರೋದು ಹೇಗೆ? ಹೋದೆ. ಆ ದಿನ ಅಲ್ಲೇ ಉಳಿದೆ'' ತೇಜಸ್ವಿಯವರನ್ನು ನೆನಪಿಸಿಕೊಳ್ಳುತ್ತ ಎಷ್ಟು ದೊಡ್ಡ ಲೋಕದೊಳಗೆ ನಾನು ಬದುಕಿಬಿಟ್ಟೆ, ಇದು ನನ್ನ ಅದೃಷ್ಟ ಅನ್ನಿಸುತ್ತೆ ಎನ್ನುವ ಪದ್ಮಾ ಅವರ ಮಾತುಗಳು ವಿನಯದ ಪ್ರತೀಕವಾಗಿವೆ.

ಬಹಳ ಹಿಂದೆ ಹೆನ್ರಿ ವಾಲ್ಟರ್ ಬೇಟ್ಸ್ ಅವರು ಬರೆದ ದ ನ್ಯಾಚುರಲಿಸ್ಟ್ ಆನ್ ದ ರಿವರ್ ಅಮೆಜಾನ್ ಅನ್ನುವ ಪುಸ್ತಕದ ಒಂದು ಸಣ್ಣ ಭಾಗವನ್ನು ಓದಿ ಪ್ರಭಾವಿತರಾಗಿದ್ದ ಪದ್ಮಾ ಅವರು, ಸ್ನೇಹಿತರೊಬ್ಬರಿಂದ ಆ ಪುಸ್ತಕವನ್ನು ಅಮೆರಿಕಾದಿಂದ ತರಿಸಿಕೊಂಡು ಓದಿದಾಗ, ಅನುವಾದ ಮಾಡಲೇಬೇಕೆಂದು ತೀವ್ರವಾಗಿ ಅನ್ನಿಸಿತ್ತಂತೆ. ಸದ್ಯ ಅದರ ಅನುವಾದದಲ್ಲಿ ತೊಡಗಿದ್ದಾರೆ. ಎಲೆಮರೆಯ ಹೂವಿನಂತಿದ್ದು ಎಷ್ಟೊಂದು ಅರ್ಥಪೂರ್ಣ ಕೆಲಸಗಳನ್ನು ಮಾಡುತ್ತಿರುವ ಪದ್ಮಾ ಅವರು ಹಾಸನದವರು ಎಂಬುದು ನಮ್ಮ ಹೆಮ್ಮೆ. ಮೈಸೂರಿನಲ್ಲಿ ನೆಲೆಸಿ, ತಮ್ಮ 83ನೆಯ ವರ್ಷದ ಇಳಿಗಾಲದಲ್ಲಿಯೂ ಅವರು ಬರವಣಿಗೆ, ಅನುವಾದ ಕೆಲಸ, ಪುಸ್ತಕ ಪ್ರಕಾಶನದ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದು ನಮಗೆಲ್ಲ ಮಾದರಿಯಾಗಿದೆ.

ಪುಸ್ತಕ ವಿಮರ್ಶೆ ಅಂತಃಕರಣ ಕಲಕುವ 'ಕರಾವಳಿಯ ರಕ್ತ ಕಣ್ಣೀರು'

ಮಾರಿಕೊಂಡ ಮಾಧ್ಯಮಗಳ ನಡುವೆ, ಯಾವುದೇ ಒಂದು ಧರ್ಮದ ಪರ ನಿಲ್ಲದೆ, ಪರಿಸ್ಥಿತಿಯನ್ನು ವಸ್ತುನಿಷ್ಠವಾಗಿ ದಾಖಲಿಸಿ, ಪತ್ರಿಕಾ ಧರ್ಮವನ್ನು ಗೌರವಿಸಿದ್ದಾರೆ ಲೇಖಕ ಇರ್ಷಾದ್.



ವರ್ಗ ವ್ಯವಸ್ಥೆಯೊಳಗೆ ಸಂಪತ್ತಿದ್ದಲ್ಲಿ ಶೋಷಣೆ, ಹಿಂಸೆಯಿರುತ್ತದೆ. ಹಾಗೆಯೇ ಸೌಹಾರ್ದ ಸಂಪತ್ತು ತುಂಬಿದ್ದ ಕರಾವಳಿಯಲ್ಲಿ ಮತೀಯವಾದ ಎಂಬ ರಾಕ್ಷಸನನ್ನು ಹುಟ್ಟಿಸಿ, ಬೆಳೆಸಲು ನಮ್ಮ ನಾಡಿನ ವ್ಯವಸ್ಥೆ ನಡೆಸಿದ ಪ್ರಯತ್ನ, ಬಲಿತೆಗೆದುಕೊಂಡ ಸಾಕ್ಷಿಗಳನ್ನು, ನೊಂದವರ, ಕೊಂದವರ ಎಲ್ಲರೆದುರು ತೆರೆದಿಟ್ಟಿದೆ ಲೇಖಕ, ಪತ್ರಕರ್ತ ಇರ್ಷಾದ್ ಉಪ್ಪಿನಂಗಡಿಯವರ ಕರಾವಳಿಯ ರಕ್ತ ಕಣ್ಣೀರು.

ಕಳೆದ ಒಂದು ದಶಕದಲ್ಲಿ ಮನುಜ ಮತದ ಮೇಲೆ ಕೋಮುದ್ವೇಷದ ಸವಾರಿ ಮಾಡಿದ ಹತ್ತಾರು ಕೃತ್ಯಗಳು ಈ ಪುಸ್ತಕದಲ್ಲಿ ಆಧಾರವಾಗಿದೆ. ಸೌಹಾರ್ದತೆ, ಕಾರುಣ್ಯ ತುಂಬಿದ್ದ ದಕ್ಷಿಣಕನ್ನಡದಲ್ಲಿ ಹಿಂದೂ ಮತ್ತು ಮುಸಲ್ಮಾನ ಮತೀಯವಾದಿಗಳು ಆ ನೆಲದ ಚಿತ್ರಣವನ್ನು ಬದಲಿಸಲು ಬಲಿತೆಗೆದುಕೊಂಡಿದ್ದು ತಮ್ಮವರನ್ನೇ. ಕೋಮುದ್ವೇಷ ತನ್ನ ರಕ್ತದಾಹ ತೀರಿಸಿಕೊಳ್ಳಲು ಬಡವರ ಮಕ್ಕಳು, ಅಮಾಯಕರನ್ನು ಶಸ್ತ್ರವಾಗಿ ಬಳಸಿಕೊಂಡು ಅವರ ಬದುಕುಗಳನ್ನು ಬಲಿಪಡೆದು ಕುಟುಂಬಗಳನ್ನು ಅನಾಥ ಮಾಡಿದೆ. ಆ ರಾಕ್ಷಸನನ್ನು ಹುಟ್ಟು ಹಾಕಿ, ಸಲಹುತ್ತಿರುವ ಕಾಣದ ಕೈಗಳು ಯಾವುವು ಎಂಬುದನ್ನು ಈ ಲೇಖನಗಳು ಹುಡುಕಾಟಕ್ಕೆ ಹಚ್ಚುತ್ತವೆ.

ಮಹಿಳೆ, ರಾಣಿ ಅಬ್ಬಕ್ಕ ಜತೆಯಾಗಿ ನಿಂತು ಪೋರ್ಚುಗೀಸ್ ಸೈನ್ಯಕ್ಕೆ ಒಗ್ಗಟ್ಟಿನ ಪಾಠ ಕಲಿಸಿದ ಇಲ್ಲಿನ ಹಿಂದೂ ಮುಸಲ್ಮಾನರು ತಮ್ಮವರದ್ದೇ ಕೋಮುದ್ವೇಷದ ಎದುರು ಕಂಗಾಲಾಗಿದ್ದಾರೆ. ಎಲ್ಲರ ಅಂಗಳದಲ್ಲಿ ಯಾರಿಗೂ ಅಂಜದೆ ಬೆಳಗುತ್ತಿದ್ದ ದೀಪಗಳು ಮತೀಯವಾದಿಗಳ ದ್ವೇಷ ದಳ್ಳುರಿಗೆ ನಲುಗಿರುವುದಕ್ಕೆ ಹಲವು ಸನ್ನಿವೇಷಗಳು ಇಲ್ಲಿ ಕಣ್ಣಿಗೆ ರಾಚುತ್ತವೆ.

ಕರಾವಳಿ ತಾಯಂದಿರ ರ'ಕ'್ತ ಕ'ಣ್ಣ'ೀರಿಗೆ, ಕುಟುಂಬದವರಿಗಾದ ಮಾಸದ ಗಾಯಗಳಿಗೆ ಕಾರಣ ಮತೀಯವಾದಿಗಳು ಮಾತ್ರವಲ್ಲ. ಮತೀಯವಾದಿಗಳಿಗೆ ಕಡಿವಾಣ ಹಾಕುವ ಬದಲು, ತನ್ನವರು, ತನ್ನ ನೆರೆಹೊರೆಯವರು, ತನ್ನಂತೆಯೇ ಇರುವವರು, ಕಡೆಗೆ ತನ್ನನ್ನೂ ತಾನು ಹತ್ಯೆ ಮಾಡಿಕೊಳ್ಳುವ ಕ್ರೌರ್ಯ ಮೆರೆಯಲು, ಸ್ವತಂತ್ರವಾಗಿ ಬಿಟ್ಟ ಪೊಲೀಸ್ ಇಲಾಖೆ. ಘಟನೆಗಳು ಹೆಚ್ಚುತ್ತಿದ್ದರೂ ಆ ನೆಲದಲ್ಲಿ ಶಾಂತಿ ನೆಲೆಸಲು ಕ್ರಮಕೈಗೊಳ್ಳುವುದನ್ನು ಬಿಟ್ಟು, ಧರ್ಮ ರಾಜಕಾರಣ ನಡೆಸಿದ ಸರ್ಕಾರಗಳು.

ತನ್ನ ಕಣ್ಣ ಮುಂದೆಯೇ ಸಂವಿಧಾನ ವಿರೋಧಿ ಕೋಮು ಕೃತ್ಯಗಳು ನಡೆದಿದ್ದರೂ, ಹಿಂದೂ ಮುಸ್ಲಿಂ ಮತೀಯವಾದಿಗಳನ್ನು ಮೆರೆಯಲು ಬಿಟ್ಟು ಬಲಿಪಶುಗಳಿಗೆ ನ್ಯಾಯ ನಿರಾಕರಣೆ ಮಾಡಿದ ಈ ನೆಲದ ನ್ಯಾಯಾಲಯಗಳು. ಮಾತ್ರವಲ್ಲ ತನ್ನ ಅಸ್ತಿತ್ವವನ್ನೇ ಮಾರಿಕೊಂಡಿರುವ ಮಾಧ್ಯಮಗಳು ಉರಿಯುವ ಬೆಂಕಿಗೆ ತುಪ್ಪ ಸುರಿದು ಒಬ್ಬ ವ್ಯಕ್ತಿ, ಒಂದು ಪ್ರದೇಶದಲ್ಲಿ ಪರಿಹರಿಸಿಕೊಳ್ಳಬಹುದಾದ ಸಮಸ್ಯೆಯನ್ನು ರಾಷ್ಟ್ರೀಯ ಸಮಸ್ಯೆಯಾಗಿ ಬಿಂಬಿಸಿ, ಹಬ್ಬಿಸಿ, ದೇಶದ ಹಲವೆಡೆ ಹಿಂದೂ ಮುಸಲ್ಮಾನರನ್ನು ಒಡೆದು ಹಾಕಲು ಮಾಡಿದ ಸಮಾಜಘಾತುಕ ಕೆಲಸ.

ಅದಕ್ಕೆ ಸ್ಪಷ್ಟ ಉದಾಹರಣೆ ಅಮಾಯಕ ಪ್ರವೀಣ್ ನೆಟ್ಟಾರು ಹತ್ಯೆ. ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಾವು ರಾಜ್ಯದ ಜನರ ಪ್ರತಿನಿಧಿ ಎಂಬುದಕ್ಕೆ ಎಳ್ಳು ನೀರು ಬಿಟ್ಟು, ಪ್ರವೀಣ್ ಅವರ ಮನೆಗೆ ಮಾತ್ರ ಭೇಟಿ ನೀಡುತ್ತಾರೆ. ಈ ಕೊಲೆಯನ್ನು ರಾಜಕೀಯ ದಾಳವನ್ನಾಗಿ ಮಾಡಿಕೊಂಡು, ಒಂದು ಧರ್ಮದ ಜನರನ್ನು ಒಲಿಸಿಕೊಳ್ಳುವ ಪ್ರಯತ್ನ ನಡೆಸುತ್ತಾರೆ. ಅಂದಿನ ಬಿಜೆಪಿ ಶಾಸಕರು, ನಾಯಕರು ಹಿಂದೂಗಳನ್ನು ಮುಸಲ್ಮಾನರ ವಿರುದ್ಧ ಎತ್ತಿ ಕಟ್ಟಿ, ಕೋಮು ಸೌಹಾರ್ದತೆ ಕದಡಲು ಸಕಲ ಪ್ರಯತ್ನಗಳನ್ನೂ ಮಾಡಿದ್ದಾರೆ. ಇದೇ ನೆಲದ ಸಚಿವೆಯೊಬ್ಬರು, ತನ್ನವರ ದುರ್ಬರ ಹತ್ಯೆಗಳಿಂದ ದಿಕ್ಕುಗೆಟ್ಟ ಹತ್ತಾರು ತಾಯಂದಿರ, ಹೆಣ್ಣು ಮಕ್ಕಳೆದುರು ಮತೀಯ ವಿಷಕಾರಿ, ಹೆಣ್ಣು ಎಂಬ ಶೋಭೆಗೆ ಕಳಂಕ ತಂದಿದ್ದರು. ಪರಿಣಾಮ ಕರಾವಳಿಯಲ್ಲಿ ನಡೆದ ಕೃತ್ಯದ ಕುರಿತು ಬೇರೆ ಜಿಲ್ಲೆಗಳಲ್ಲಿಯೂ ಹಿಂದೂ ಮುಸಲ್ಮಾನರು ಪರಸ್ಪರ ಬುಸುಗುಟ್ಟುವ, ದುರುಗುಟ್ಟುವ, ಅನುಮಾನಿಸುವ ವಿಷಮ ಸ್ಥಿತಿ ಎದುರಿಸಬೇಕಾಯಿತು. ಪ್ರವೀಣ್ ಕೊಲೆಯ ಘಟನೆಯನ್ನು ಓದುವಾಗ ಇವೆಲ್ಲಾ ಕಣ್ಣ ಮುಂದೆ ಹಾದುಹೋಗುತ್ತದೆ.

ಸಣ್ಣ, ಸ್ಥಳೀಯ ಘಟನೆಗಳಿಗೂ ಕೋಮು ಬಣ್ಣ ಬಳಿದ ದುಷ್ಟ ಶಕ್ತಿಗಳ ನಡುವೆಯೂ, ತನ್ನ ಕುಟುಂಬದ ದೀಪ ಆರಿಸಿದವರ ಕೇಡು ಬಯಸದ ಮನುಷ್ಯರು ಇನ್ನೂ ಇದ್ದಾರೆ. ಅಂತಃಕರಣ ಕಲಕುವ ಕರುಣೆ, ಸಹಾನುಭೂತಿ, ಪ್ರೀತಿ ಈ ನೆಲದ ಮೂಲಗುಣ ಎಂಬುದನ್ನು ಸಾಬೀತು ಮಾಡುತ್ತಿದ್ದಾರೆ. ಮಾರಿಕೊಂಡ ಮಾಧ್ಯಮಗಳ ನಡುವೆ, ಯಾವುದೇ ಒಂದು ಧರ್ಮದ ಪರ ನಿಲ್ಲದೆ, ಪರಿಸ್ಥಿತಿಯನ್ನು ವಸ್ತುನಿಷ್ಠವಾಗಿ ದಾಖಲಿಸಿ, ಪತ್ರಿಕಾ ಧರ್ಮವನ್ನು ಗೌರವಿಸಿದ್ದಾರೆ ಲೇಖಕ ಇರ್ಷಾದ್.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR